

ಕಲ್ಯಾಣ ಕಿರಣ

ಜನವರಿ-2013

ಬೆಲೆ-20/-





ಉಡುತಡಿಯಲ್ಲಿ ಉಗಮ; ಬಿದಿಗೆಯ ಚಂದ್ರನಂತೆ ಪ್ರಗತಿ; ವಿಘ್ನಪರಂಪರೆಯನ್ನು ಎದುರಿಸುತ್ತ ಗಮನ, ನಡೆ ಶುಚಿ, ನುಡಿ ಶುಚಿಯಾಗಿ ಪರತತ್ವವನ್ನು ಮೈಗೂಡಿಸಿಕೊಂಡ ಕಲ್ಯಾಣದ ಶರಣರ ಬಳಗದೊಡನೆ ಸಂಗಮ, ಜಗದೆಡೆಯಲ್ಲಿ ಓತಪ್ರೋತವಾಗಿ ತುಂಬಿದ ಲಿಂಗದೇವನೊಡನೆ ಕದಳಿಯಲ್ಲಿ ಸಮಾಗಮ, ಇಂತಹ ದೈವೀ ತರಂಗಿಣಿ ಅಕ್ಕಮಹಾದೇವಿ.

" ತೋರಲು ಹೆಣ್ಣು ರೂಪಾದರೇನು ಭಾವಿಸಲು ಗಂಡು ರೂಪು ನೋಡಾ." ಎಂಬ ವಿಲಕ್ಷಣ ಕೆಚ್ಚು "ಆತ್ಮ ಸಂಗಾತಕ್ಕೆ ಚನ್ನಮಲ್ಲಿಕಾರ್ಜುನ ಎನಗುಂಟು" ಎಂಬ ಆತ್ಮವಿಶ್ವಾಸ ಇಂಥ ಅಕ್ಕಮಹಾದೇವಿ ಉಡುತಡಿಯ ಉಷೆ ಮಾತ್ರವಲ್ಲ, ಕೇವಲ ಕನ್ನಡನಾಡಿನ ತಣ್ಸೊಡರು ಅಲ್ಲ. ಜಂಬೂದ್ವೀಪದ ನಂದಾದೀಪವಷ್ಟೇ ಅಲ್ಲ, ವಿಶ್ವದ ವಿನೂತನ ಪರಂಜ್ಯೋತಿ.

ಬೇಸಿಗೆಯ ಹಗಲ ದಗೆಯಲ್ಲಿ ಬೆಂದು ಬಸವಳಿದವರಿಗೆ ತಂಗಾಳಿ ತಂಪು ಸ್ಪರ್ಶವಿತ್ತು ಮುದಗೊಳಿಸುವಂತೆ ನೂರಾರು ವರ್ಷಗಳಿಂದ ಶೂದ್ರತ್ವ, ಪುರುಷದಾಸ್ಯ, ಮಾಯೆತನ, ಕೀಳರಿಮೆ ಇವುಗಳ ಬೇಗೆಯಲ್ಲಿ ದಹಿಸಲ್ಪಟ್ಟ ಸ್ತ್ರೀಕುಲಕ್ಕೆ ಆತ್ಮವಿಶ್ವಾಸದ ಅಮೃತವೆರೆದ ವಿರಾಗಿಣಿ ಅಕ್ಕಮಹಾದೇವಿ. ಏಕೆ ಸಂಶಯವೇ? ಕುತೂಹಲವೇ? ಅಭಿಮಾನವೇ? ಹಾಗಾದರೆ ಬೇಗ ಓದಿರಿ–ಈ ತರಂಗಿಣಿಯನ್ನು.





॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

ಇಪ್ಪತ್ತಾರನೆಯ ಶರಣ ಮೇಳ

2013ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಆವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತಾರನೆಯ ಶರಣ ಮೇಳವು 2013ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ. ದಿ. 11 ಮತ್ತು 12 ರಂದು ಧರ್ಮ ಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 150 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ
ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು ''ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ''ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ, ಬ್ಯಾಂಕ್ ಖಾತೆಗಳು

Sharana Mela Utsava Samithi, SB A/c 10818354899
Basava Dharma Peetha, SB A/c No. 10818354684
Basava Mahamane Charitable Trust SB A/c 32391821105

Sharana Mela Utsava Samithi, (Canara Bank, Bangalore) SB A/c 1145101024057 ಕಾಣಿಕೆ ಕಳಿಸುವವರು ನೇರವಾಗಿ ವರ್ಗಾಯಿಸಿದರೆ ಕಾರ್ಯಾಲಯಕ್ಕೆ ತಿಳಿಸಬೇಕು. 80ಜಿ ಇನ್‌ಕಮ್‌ಟ್ಯಾಕ್ಸ್ ರಿಯಾಯಿತಿ ಬೇಕೆನ್ನುವವರು ಕಾರ್ಯಾಲಯಕ್ಕೆ ಸಂಪರ್ಕಿಸಿ.

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268014/268007/268140

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ-42 ಬಸವ ಶಕೆ -879 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-1 ಜನವರಿ-2013 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಲೇಖನಗಳು	ಲೇಖಕರು	ಪುಟ
1. 26ನೆಯ ಶರಣ ಮೇಳ- 2013	–	1
2. ಬಸವ ವಚನಾಮೃತ-48	ಮಾತಾಜಿ	4
3. ಬಸವಾದಿ ಶರಣರ ಸಂಕಲ್ಪ	ಪೂಜ್ಯ ಸರ್ವಮಂಗಳಾದೇವಿ	15
4. 63 ಅಡಿ ಎತ್ತರದ ಅಪ್ಪಾಜಿಯವರು ಸ್ಮಾರಕ	ಮಾತಾಜಿ	16
5. 111 ಅಡಿ ಎತ್ತರದ ಬಸವಣ್ಣನವರ ಸ್ಮಾರಕ	ಮಾತಾಜಿ	20
6. 60 ವರ್ಷದ ವಸಂತೋತ್ಸವವನ್ನಾಚರಿಸಿಕೊಳ್ಳುತ್ತಿರುವ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ	–	23
7. ವಿಶ್ವಜ್ಯೋತಿ ಅಕ್ಕಮಹಾದೇವಿಯವರ ದಿವ್ಯ ನಿಲುವು	ಸಚ್ಚಿದಾನಂದ ಚಟ್ನಳ್ಳಿ	24
8. ಶರಣಾಗುವೆ ಬಸವ (ಕವನ)	ಪ್ರಿಯಂಕಾ, ಬದಾಮಿ	32

ಮುಖಪುಟ : ಬಸವ ಗಂಗೋತ್ರಿಯಲ್ಲಿ ನಿರ್ಮಾಣ ಮಾಡಲು ಯೋಜಿಸಲಾಗಿರುವ ಪುತ್ಥಳಿ
ಹೊದ್ದಿಕೆಯ ನಾಲ್ಕನೆ ಪುಟ : ಕೂಡಲ ಸಂಗಮದ ಬಸವ ಧರ್ಮ ಪೀಠದ ಆವರಣದಲ್ಲಿ ನಿರ್ಮಾಣ ಮಾಡಲು ಯೋಜಿಸಲಾಗಿರುವ ಪುತ್ಥಳಿ

ಜನವರಿ-ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಬರುವ ಹಬ್ಬ-ಹುಣ್ಣಿಮೆಗಳು

ಜನವರಿ 11ರಿಂದ 15 ಶರಣ ಮೇಳ
ಫೆಬ್ರವರಿ 18 ಹರ್ಡೇಕರ್ ಮಂಜಪ್ಪನವರ ಜಯಂತಿ
ಫೆಬ್ರವರಿ 25 ಉಳಿವೆಯಲ್ಲಿ ಚನ್ನಬಸವೇಶ್ವರ ರಥೋತ್ಸವ,
ರಾಷ್ಟ್ರೀಯ ಬಸವ ದಳಗಳಿಂದ ಬೆಳುದಿಂಗಳ ಗಣ ಭೋಜನ
ಮಾರ್ಚ್ 10 ಶಿವರಾತ್ರಿ – ಶರಣ ಗಣಮೇಳ
ಮಾರ್ಚ್ 13 ಮಾತಾಜಿಯವರ 68ನೆಯ ವರ್ಧಂತಿ

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್
ಬೆಂಗಳೂರು-560010
ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com

ಭಾಗ-48 **ಬಸವ ವಚನಾಮೃತ** - ಮಾತಾಜಿ

1074. ಸುಜ್ಞಾನಿಯ ಮಾಟ

ತಾನಿಲ್ಲದೆ ತಾ ಮಾಡುವ ಸಹಜನು ;
ತಾನಿಲ್ಲದೆ ತಾ ನೀಡುವ ಸಹಜನು
ತಾ ಬೇರಿಲ್ಲದೆ ಬೆರಸಿಹ ನಿಜಪದದೊಳು,
ಏನೊಂದರ ಹಮ್ಮಿಲ್ಲದ ಸಹಜ ಸುಜ್ಞಾನಿಯ
ಮಾಟದ ಕೂಟದ ಸ್ಥಲದೊಳು ಕೂಡಿಹ
ಲಿಂಗದೇವನ ಶರಣನನೇನೆಂದುಪಮಿಸುವೆ. -ಬವದೀ. 1076

ನಾನು ಎಂಬ ಹಮ್ಮಿಲ್ಲದೆ ಕ್ರಿಯೆಗಳನ್ನು ಮಾಡುವ ಸಹಜನಾಗಿರುತ್ತಾನೆ ಶರಣನು. ನಾನು ಎಂಬ ಹಮ್ಮು, ಸ್ವಾರ್ಥ ಇಲ್ಲದೆ ನೀಡುವ ಸಹಜನಾಗಿರುತ್ತಾನೆ ಶರಣನು. ಕೀರ್ತಿವಾರ್ತೆಗಾಗಿ ನೀಡುವುದಿಲ್ಲ ; ಫಲಾಪೇಕ್ಷೆಯಿಂದ ನೀಡುವುದಿಲ್ಲ. ಅಂತಹ ನಿರ್ಲೇಪನು ಶರಣನು. ಮನಸ್ಸು ನೋಡಿದರೆ ಪರಮಾತ್ಮನ ನೆನಹಿನಲ್ಲಿ ಬೇರಿಲ್ಲದೆ ಬೆರೆಸಿದೆ. ಯಾವ ರೀತಿಯ ಹಮ್ಮೂ ಇಲ್ಲದೆ ಸಹಜ ಸುಜ್ಞಾನಿಯಾಗಿ ಮಾಟವನ್ನೇ ಲಿಂಗದ ಕೂಟವನ್ನಾಗಿ ಮಾಡಿಕೊಂಡು ಕ್ರಿಯೆಗಳನ್ನು ಮಾಡುವ ಶರಣನನ್ನು ವರ್ಣಿಸಲು ಸಾಧ್ಯವಿಲ್ಲ.

ಶರಣನು ವ್ಯಾವಹಾರಿಕವಾಗಿ ಎಲ್ಲ ಕಾರ್ಯಗಳನ್ನೂ ಮಾಡುತ್ತಾನೆ, ಕರ್ತವ್ಯವನ್ನು ನಿಭಾಯಿಸುತ್ತಾನೆ. ಲಿಂಗದೇವನ ಕೈಯೊಳಗಣ ಒಂದು ಸಾಧನ ಎಂಬ ದೈವೀಪ್ರಜ್ಞೆಯಿಂದ ಈ ಜಗತ್ತಿನಲ್ಲಿ ಕಾರ್ಯೋನ್ಮುಖನಾಗಿರುತ್ತಾನೆ.

1075. ತಾನಿಲ್ಲದ ದೈವೀಪ್ರಜ್ಞೆ

ಮಾಡುವಂತಿರಬೇಕು ಮಾಡದಂತಿರಬೇಕು
ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು
ನೋಡುವಂತಿರಬೇಕು ನೋಡದಂತಿರಬೇಕು
ನೋಡುವ ನೋಟದೊಳಗೆ ತಾನಿಲ್ಲದಂತಿರಬೇಕು
ಲಿಂಗದೇವರ ನೆನೆವುತ್ತ ನೆನೆವುತ್ತ ನೆನೆಯದಂತಿರಬೇಕು. -ಬವದೀ. 1077

ಶರಣ-ಐಕ್ಯ ಸ್ಥಲದಲ್ಲಿ ನಿಂದಿರುವ ಶರಣನ ಲೀಲೆಗಳು ಅಂಗಕ್ರಿಯೆಗಳಲ್ಲ, ಲಿಂಗಲೀಲೆಗಳು. ಏಕೆಂದರೆ ಒಳಗೆ ಕುಳಿತು ಆಡಿಸುವಾತ ಸಾಕ್ಷಾತ್ ಲಿಂಗದೇವ. ಶರಣನು ಎಲ್ಲ ಕ್ರಿಯೆಗಳನ್ನು ಮಾಡುತ್ತಾನೆ, ಆದರೆ 'ನಾನು ಮಾಡಿದೆ' ಎಂಬ ಹಮ್ಮಿಲ್ಲದೆ ಮಾಡುತ್ತಾನೆ. ಹೀಗಾಗಿ ಮಾಡದಂತೆಯೂ ಇರುತ್ತಾನೆ. ಅವನ ನೋಟ ಅಂಗಕ್ರಿಯೆಯಾಗದೆ ಲಿಂಗನೋಟವಾಗುತ್ತದೆ. ಹೀಗಾಗಿ ಅವನ ನೋಟ ಪರುಷನೋಟವಾಗುತ್ತದೆ. ಕಣ್ಣು ಶಿವಲಿಂಗ(divine eye)ವಾಗಿರುತ್ತದೆ. ಶರಣನು ಲಿಂಗದೇವನನ್ನು ನೆನೆಯುತ್ತಾನೆ. ಉದ್ದೇಶಪೂರ್ವಕವಾಗಿ ಅಲ್ಲ. ಅದು ಅವನ ಸಹಜ ಸ್ಥಿತಿಯಾಗಿರುತ್ತದೆ. ಮನವು ಮಹಾಲಿಂಗವಾಗಿರುತ್ತದೆ. ಹೀಗಾಗಿ ಶರಣನ ನೋಟ ಲಿಂಗನೋಟ, ಮಾಟವೆಲ್ಲ ಲಿಂಗಮಾಟ; ಅದು ಪಾಪ-ಪುಣ್ಯಕ್ಕೆ ಅತೀತವಾದುದು. ಮಾನವ ಶರೀರಧಾರಿಯಾಗಿದ್ದರೂ ಅವನ ಕ್ರಿಯೆಗಳೆಲ್ಲ ಲಿಂಗಕ್ರಿಯೆಗಳಾಗಿ ಇರುತ್ತವೆ.

1076. ನಿರ್ಭಯ ಶರಣ.

ಸಂಸಾರವೆಂಬಡವಿಯಲ್ಲಿ ಹುಲಿಯುಂಟು : ಕರಡಿಯುಂಟು,
ಶರಣನಂಜನಂಜ, ಮಹಾಧೀರ ಶರಣನಂಜನಂಜ !
ಲಿಂಗದೇವನ ಶರಣಂಗೆ ನಿರ್ಭಯ. -ಬವದೀ. 1078

ಸಂಸಾರ ಎಂದರೆ ಇಲ್ಲಿ ಹೆಂಡತಿ(ಗಂಡ) ಮಕ್ಕಳು, ಬಂಧು ಬಳಗ ಇರುವ ಸಂಬಂಧ ಸರಪಳಿ ಎಂದು ಅರ್ಥೈಸಬಹುದು. ಸಂಸಾರದಲ್ಲಿ ಅನೇಕ ಬಗೆಯ ಸಮಸ್ಯೆಗಳು ಅಡವಿಯಲ್ಲಿ ಬರುವ ಹುಲಿ, ಕರಡಿಗಳಂತೆ ಬರುವುದುಂಟು, ಆರ್ಥಿಕ ಸಂಕಷ್ಟ ಬರಬಹುದು. ರೋಗ ರುಜಿನಗಳು ದಾಳಿ ಮಾಡಬಹುದು. ವೈಷಮ್ಯ-ವಿರಸ ಎರಗಬಹುದು. ಸಾವು-ವಿಯೋಗ ಸಂಭವಿಸಬಹುದು. ನಿಜ ಶರಣನು ಇಂಥ ಯಾವ ಕಷ್ಟಗಳಿಗೂ ಹೆದರುವುದಿಲ್ಲ. ಇನ್ನು ಸಂಸಾರ ಎಂದರೆ ಜಗತ್ತು ಎಂದು ತೆಗೆದುಕೊಂಡರೆ ನಿಂದೆ-ಅಪವಾದ, ಟೀಕೆ ಟಿಪ್ಪಣೆ ಬರಬಹುದು.

ಇಂಥ ಹುಲಿಕರಡಿಗೆ ಶರಣನು ಅಂಜುವುದಿಲ್ಲ. ಶರಣನು ಎಷ್ಟು ಸಾತ್ವಿಕನೋ ಅಷ್ಟೇ ಧೈರ್ಯಶಾಲಿ ; ಅವನು ನಿರ್ಭಯದಿಂದ ಕೂಡಿದವನು.

1077. ಶರಣರ ಸಂಗವೋ ? ದೇವರ ಪರೀಕ್ಷೆಯೋ ?

ಬೆದರಿಸುವ ಸಂಗ ಬೆಚ್ಚಿಸುವ ಸಂಗ
ಬಿಚ್ಚಿ ಬಿಸುಡುವ ಸಂಗ,
ತನ್ನ ನಚ್ಚಿ ಮಚ್ಚಿ ಮುಯ್ಯಾಂತೆನೆಂದಡೆ ಮೇಳವಾಗುವ ಸಂಗ,
ಬೋಳೈಸುವ ಸಂಗ ಆಳಿಗೊಳಿಸುವ ಸಂಗ,
ಇದಿರ ಕೈಯಲ್ಲಿ ಅಳಲಿಸುವ ಸಂಗ,
ಬಳಲಿಸುವ ಸಂಗ, ಒತ್ತಿ ನೋಡುವ ಸಂಗ ಒಳಹೊರಗೆನ್ನದೆ
ಲಿಂಗದೇವಯ್ಯಾ,
ಮಡಿವಾಳ ಮಾಚಿತಂದೆಯ ಕೃಪೆಯುಳ್ಳನ್ನಕ್ಕರ ನಾನಂಜೆನು -ಬವದೀ. 1079

"ಸಂಗ" ಎನ್ನುವ ಪದವನ್ನು ಎರಡು ಅರ್ಥದಲ್ಲಿ ನಾವು ವ್ಯಾಖ್ಯಾನಿಸಬಹುದು. 1. ದೇವರು 2. ಶರಣರ ಸಂಗ. ಮೊದಲನೆಯ ಅರ್ಥದಲ್ಲಿ ತೆಗೆದುಕೊಂಡರೆ- "ಲಿಂಗದೇವರು ತನ್ನನ್ನು ನಂಬಿದವರಿಗೆ ಬೆದರಿಸುವಂತೆ ಮಾಡುತ್ತಾನೆ, ಗಾಬರಿಯಿಂದ ಬೆಚ್ಚುವಂತೆ ಮಾಡುತ್ತಾನೆ, ತನ್ನಿಂದ ದೂರ ಎಸೆಯುವಂತೆ ಮಾಡುತ್ತಾನೆ. ಎಂಥಾ ಪ್ರಸಂಗದಲ್ಲೂ ನಂಬಿಕೆಯನ್ನು ದೃಢವಾಗಿರಿಸಿ ಕೊಂಡು, ದೇವನನ್ನು ಪ್ರೀತಿಸುತ್ತೇನೆಂದರೆ ಅಂಥ ಭಕ್ತನ ಕೂಡ ಮೇಳ (ಸ್ನೇಹ) ಮಾಡುತ್ತಾನೆ. ತಾನು ಮಾಡಿದ ಪರೀಕ್ಷೆ ಸಾಲದೆ ಇನ್ನಿತರರ ಕೈಲಿ ಬೋಳೈಸುತ್ತಾನೆ ಅಂದರೆ ಕಾಟ ಕೊಡುತ್ತಾನೆ ; ಆಳಿಗೊಳ್ಳುವಂತೆ ಅಂದರೆ ತಿರಸ್ಕರಿಸುವಂತೆ ಮಾಡುತ್ತಾನೆ. ಅಳಲಿಸುತ್ತಾನೆ, ಬಳಲಿಸುತ್ತಾನೆ, ಒಳಹೊರಗೆನ್ನದೆ ಒತ್ತಿ ಪರೀಕ್ಷಿಸುತ್ತಾನೆ. ಲಿಂಗದೇವನು ಏನೇ ಮಾಡಲಿ ಮಡಿವಾಳ ಮಾಚಿತಂದೆಯ ಕೃಪೆ ಇರುವತನಕ ನಾನು ಹೆದರುವುದಿಲ್ಲ" ಎನ್ನುತ್ತಾರೆ ಗುರು ಬಸವಣ್ಣನವರು.

ಇನ್ನು ಸಂಗ ಎಂಬ ಪದವನ್ನು ಶರಣರ ಸಂಗ ಎಂಬರ್ಥದಲ್ಲಿ ತೆಗೆದುಕೊಳ್ಳೋಣ. ಶರಣರ ಸಂಗ ಒಂದು ಆತ್ಮೀಯ ಬಂಧನ. ಒಬ್ಬರಿಗೊಬ್ಬರು, ತಪ್ಪು ಮಾಡಿದಾಗ ಬೆದರಿಸುವರು ಬೆಚ್ಚಿಸುವರು, ಸಿಟ್ಟು ಮಾಡಿ ದೂರಮಾಡುವರು. ಆದರೆ ನಚ್ಚಿ-ನಂಬಿಕೆಯಿಂದ, ವಿಶ್ವಾಸವಿಟ್ಟು, ಪ್ರೀತಿಸಿದರೆ ಅಷ್ಟೇ ಪ್ರೀತಿಯಿಂದ ಸ್ನೇಹ (ಮೇಳ) ಮಾಡುವರು. ಶರಣರು ತಾತ್ವಿಕ ದೋಷಗಳನ್ನು ಮಾಡಿದಾಗ ಪರಸ್ಪರ ಛೇಡಿಸುವರು, ಮೂದಲಿಸುವರು, ಅಳಲಿಸುವರು, ಬಳಲಿಸುವರು. ಒಳಹೊರಗೆನ್ನದೆ ಪರೀಕ್ಷಿಸುವರು. "ಏನು ಮಾಡಿದರೆ ಏನು ಶರಣರ ಸಂಗವನ್ನು ನಾನು ಬಿಡುವುದಿಲ್ಲ." ಎನ್ನುವ ಗುರು ಬಸವಣ್ಣನವರು "ಮಡಿವಾಳ ಮಾಚಿತಂದೆಯವರು ಇರುವಾಗ ಚಿಂತೆಯಿಲ್ಲ; ಏಕೆಂದರೆ ಏನಾದರೂ ವ್ಯತ್ಯಾಸ ಪರಸ್ಪರರಲ್ಲಿ ಬಂದರೆ ಅವರು ಸರಿಪಡಿಸುವರು." ಎನ್ನುವರು.

1078. ದೇವರ ಪರೀಕ್ಷೆ.

ಬೆದರಿಸುವ ಬೆಚ್ಚಿಸುವ ಮುಯ್ಯಾನುವ,

ಮೇಳವಾಡುವ, ಆಳಿಗೊಳಿಸುವ
ಅಳಲಿ ನುಡಿಸುವ, ಬಳಲಿಸುವನೊತ್ತಿ ನೋಡುವ,
ಒಳಹೊರಗೆ ಹೊಳೆದು ಹೋಹ, ಕೇಳದೆ ಬಹ,
ಬೇಳು ಮಾಡುವನಾಳವಾಡುವ,
ನಾ ಇದಕ್ಕಂಜೆ ಲಿಂಗದೇವಾ. –ಬವದೀ. 1080

ಹಿಂದಿನ ವಚನದ ಭಾವವೇ ಇಲ್ಲಿ ಇದೆ. ಇಲ್ಲಿ ಶರಣರ ಸಂಗ ಎಂಬರ್ಥವಿರದೆ ದೇವನ ಪರೀಕ್ಷೆ ಹೀಗಿರುತ್ತದೆ ಎಂಬ ಭಾವವಿದೆ. ಸಾಧಕನಾಗಿ ದೇವರಿಗೆ ಶರಣು ಬಂದರೆ ಬೆದರಿಸುತ್ತಾನೆ, ಬೆಚ್ಚಿಸುತ್ತಾನೆ. ಪ್ರೀತಿ ಮಾಡುತ್ತಾನೆ, ತಿರಸ್ಕರಿಸುತ್ತಾನೆ, ಅಳಲಿಸುತ್ತಾನೆ, ಬಳಲಿಸುತ್ತಾನೆ, ಒತ್ತಿ ನೋಡಿ ಪರೀಕ್ಷಿಸುತ್ತಾನೆ. ಇನ್ನು ದಿವ್ಯಾನುಭವವನ್ನು ದೇವನು ನೀಡುತ್ತಾನೆ. ತೊಂದರೆ ಕೊಡುತ್ತಾನೆ. "ಲಿಂಗದೇವನ ಈ ಯಾವ ಪರೀಕ್ಷೆಗೂ ನಾನು ಅಂಜುವುದಿಲ್ಲ" ಎನ್ನುತ್ತಾರೆ ಗುರು ಬಸವಣ್ಣನವರು.

1079. ತ್ರಿವಿಧಾರ್ಪಣೆ

ತನುವ ಬೇಡಿದಡೀವೆ ಮನವ ಬೇಡಿದಡೀವೆ,
ಧನವ ಬೇಡಿದಡೀವೆ, ನಿಮ್ಮ ಶರಣರಿಗೆ
ಎನಗೆ ಬೇಕೆಂಬ ಭಾವವು ಮನದಲ್ಲಿ ಹೊಳೆದಡೆ
ಘನಮಹಿಮ ನಿಮ್ಮ ಪಾದದಾಣೆ.
ಮನ ವಚನ ಕಾಯದಲ್ಲಿ ನೀವಲ್ಲದೆ ಮತ್ತೊಂದನರಿದಡೆ
ಲಿಂಗದೇವಾ, ಭವಘೋರದಲ್ಲಿಕ್ಕಯ್ಯಾ –ಬವದೀ. 1081

ತನು ಮನ ಧನ ದೇವರು ಕೊಟ್ಟ ಮೂರು ಸಂಪತ್ತು. ಶರಣರು ಭಕ್ತರು, ಜಂಗಮರು ಬಂದು ನನ್ನ ತನುವಿನಿಂದ ಸೇವೆಯನ್ನು ಅಪೇಕ್ಷಿಸಿದರೆ ನಾನು ಮಾಡಲು ಸಿದ್ಧ; ಮನಸ್ಸಿನಿಂದ ಸದಾ ಸಿದ್ಧ ; ನನ್ನ ಬಳಿ ಇರುವ ಸಂಪತ್ತನ್ನು ಶರಣರಿಗೆ ಧಾರೆ ಎರೆಯಲು ನಾನು ಸಿದ್ಧ. ಅವರು ಏನಾದರೂ ಬೇಡಿದಾಗ "ಇದು ನನಗೆ ಬೇಕಾಗಿತ್ತಲ್ಲ" ಎಂಬ ಭಾವ ಎಂಥ ಪ್ರಸಂಗದಲ್ಲೂ ನನ್ನ ಮನದಲ್ಲಿ ಮೂಡದು. 'ನನ್ನ ಮನ ವಚನ ಕಾಯದಲ್ಲಿ ನೀವಲ್ಲದೆ ಮತ್ತೊಂದು ಆಲೋಚನೆ ಮಾಡಿದರೆ ನನಗೆ ಘೋರ ಶಿಕ್ಷೆಯನ್ನು ಕೊಡು." ಎನ್ನುತ್ತಾರೆ ಗುರು ಬಸವಣ್ಣನವರು.

1080. ಶರಣಾಗತಿ

ಧನ ಹೋಯಿತ್ತೆಂದಡೆ, ಮನಸ್ಸು ಬೆದರಿದೊಡೆ, ಚಿತ್ತ ಹೆದರಿದಡೆ,
ತನು ಕೆರಳಿದಡೆ, ಭಾವ ಓಸರಿಸಿದಡೆ,
ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ
ತನುಮನಧನವನಲ್ಲಾಡಿಸಿ ನೋಡುವ ಒಡೆಯನು ನೀನೆ.
ಹರಣವ ಮೇಲತ್ತಡೆ ಕಳವಳವೆ, ಲಿಂಗದೇವಾ ? –ಬವದೀ. 1082

ಬಹುಶಃ ಬೃಹತ್ ಶರಣ ಗಣಪರ್ವವನ್ನು ಮಾಡಿದಾಗ ಜನಸಾಗರವೇ ಹರಿದು ಬಂದಿರಬಹುದು. ಆಗ ಉಗ್ರಾಣದಲ್ಲಿದ್ದ ಸಾಮಗ್ರಿಗಳೆಲ್ಲ (ಸಯದಾನ) ಖರ್ಚಾಗಿರಬಹುದು. ಆಗ ಧರ್ಮಪಿತರಿಗೆ "ಇದನ್ನು ಹೇಗೆ ನಿಭಾಯಿಸುವುದು?" ಎಂದು ದಿಗಿಲಾಗಿರಬಹುದು. ಆಗ ತಮ್ಮನ್ನು ತಾವೇ ಸಂತೈಸಿಕೊಂಡು ಹೇಳುತ್ತಾರೆ. "ಧನವು ವ್ಯಯವಾಗಿ ಹೋಗುತ್ತಿದೆ. ಆದರೆ ನನ್ನ ಮನಸ್ಸು ಬೆದರುವುದಿಲ್ಲ, ಚಿತ್ತ ಹೆದರುವುದಿಲ್ಲ ಶರೀರ ಕೆರಳುವುದಿಲ್ಲ ; (ಉದ್ವೇಗದ ಸಮಯದಲ್ಲಿ ವ್ಯಕ್ತಿ ಕೆರಳಿ ಎಲ್ಲರ ಮೇಲೆ ಹಾರಾಡುತ್ತಾನೆ. ಆ ವರ್ತನೆ ಧರ್ಮಪಿತರಲ್ಲಿಲ್ಲ.) ನಾನು ಏಕಾದರೂ ಇಂತಹ ಬೃಹತ್ ಕಾರ್ಯಕ್ರಮ ಹಮ್ಮಿಕೊಂಡೆನೋ ಎಂದು ಭಾವವು ಓಸರಿಸುವುದಿಲ್ಲ. ಇದು ನಿಮ್ಮಾಣೆಯಾಗಿಯೂ, ಶರಣರಾಣೆಯಾಗಿಯೂ ಸತ್ಯ. ನನಗೆ ಗೊತ್ತು ತನುಮನ ಧನಗಳ

ಅಲ್ಲಾಡಿಸಿ ನೋಡುವ ಒಡೆಯನು ನೀನು. ಹೇಗೆ ತಂದಿಕ್ಕ ಬೇಕೆಂಬುದೂ ನಿನಗೆ ಗೊತ್ತು. ನನ್ನ ಪ್ರಾಣವ ರಕ್ಷಿಸುವವನು ನೀನಿದ್ದಾಗ ಲಿಂಗದೇವ ನಾನೇಕೆ ಕಳವಳಪಡಲಿ ?" ಎನ್ನುತ್ತಾರೆ ಧರ್ಮಪಿತರು.

11ನೇ ಕಲ್ಯಾಣ ಪರ್ವದ ಎರಡನೆ ದಿನ ದಿ.28–10–2012ರಂದು 108ಅಡಿ ಮೂರ್ತಿಯ ಲೋಕಾರ್ಪಣೆ. ಅಂದು ಧಾವಿಸುತ್ತಿದ್ದ ಜನಸಾಗರ ನೋಡಿ ನನಗೆ ಒಳಗೇ ದಿಗಿಲಾಗುತ್ತಿತ್ತು. ಅಡಿಗೆಯವರು ಹೇಗೆ ಮಾಡುವರೋ? ಊಟಕ್ಕೆ ಎಡೆ ಮಾಡುವವರು ಹೇಗೆ ನೀಡುವರೋ ಎಂದು ಆತಂಕವಾಗುತ್ತಿತ್ತು. ಕಡೆಗೆ ಧರ್ಮಪಿತರಿಗೆ ಹೇಳಿದೆ, "ನಿಮ್ಮ ಕಾಲದಲ್ಲಿ ನಡೆಯಿಸಿದ ಗಣಪರ್ವದ ಪುನರಾವರ್ತನೆಯಾಗುತ್ತಿದೆ. ನೀವು ಹೇಗೆ ನಿಭಾಯಿಸುವಿರೋ? ನಿಮ್ಮ ಕಾರ್ಯ ನೀವೇ ಮಾಡಿಕೊಳ್ಳಿರಿ." ಇಂಥ ಸಂದರ್ಭದಲ್ಲಿ ಬರೆದ ವಚನದಂತೆ ಇದು ತೋರುತ್ತಿದೆ.

ವಿ.ಸೂ: ಇನ್ನು ಮುಂದೆ ಬಸವ ವಚನ ದೀಪ್ತಿಯ ಸಂಖ್ಯೆಯನ್ನು ಮಾತ್ರ ಕೊಡಲಾಗುವುದು.

1083. ಸಮರ್ಪಣೆ

ಧನ ಸವೆದಡೆ ತನುವನರ್ಪಿಸುವೆನು;
ತನು ಸವೆದಡೆ ಮನವನರ್ಪಿಸುವೆನು;
ಮನ ಸವೆದಡೆ ಭಾವವನರ್ಪಿಸುವೆನು;
ಭಾವ ಸವೆದಡೆ ನಿರ್ಭಾವವನರ್ಪಿಸುವೆನು;
ಲಿಂಗದೇವಯ್ಯಾ, ಚನ್ನಬಸವಣ್ಣ ತೆತ್ತಿಗನಾದ ಬಳಿಕ,
ನಾನು ನಿಮ್ಮಲ್ಲಿ ಕೂಡಿಯರ್ಪಿಸಿ ಶುದ್ದನಪ್ಪೆನಯ್ಯಾ –ಬವದೀ. 1083

ಸಂಪತ್ತನ್ನು ವ್ಯಯಿಸಿ ದಾಸೋಹ ಮಾಡುವಾಗ ಧನವು ಸವೆದು ಹೋದರೆ ನಾನು ನನ್ನ ತನುವಿನ ಶಕ್ತಿಯನ್ನು ಉಪಯೋಗಿಸಿ ತನು ಸೇವೆಯನ್ನು ಮಾಡುತ್ತೇನೆ. ಶರೀರದ ಶಕ್ತಿಯೂ ಕುಂದಿ ಹೋದರೆ ಮನಸ್ಸನ್ನು ಅರ್ಪಿಸುತ್ತೇನೆ. ಮನಸ್ಸಿನ ಶಕ್ತಿಯೂ ಕುಂದಿದರೆ ನನ್ನ ಭಾವವನ್ನು ಅರ್ಪಿಸುವೆ. ಭಾವವು ದಣಿದರೆ ನಿರ್ಭಾವ ಸ್ಥಿತಿಯಿಂದ ದಾಸೋಹ ಮಾಡುತ್ತೇನೆ. ಪ್ರಸಾದಿಯಾದ ಚನ್ನಬಸವಣ್ಣ ನನ್ನ ಮಾರ್ಗದರ್ಶಕನಾದ ಕಾರಣ ಲಿಂಗದೇವಾ. ನಿಮ್ಮಲ್ಲಿ ಸಮರಸಗೊಂಡು ಶುದ್ಧನಾಗುತ್ತೇನೆ.

1084. ಶರಣರ ಸೇವೆ

ಎನ್ನ ತನುವಿಡಿದವರ ತನುವ ಬೆರೆಸುವೆನು,
ಎನ್ನ ಮನವಿಡಿದವರ ಮನವ ಬೆರಸುವೆನು,
ಎನ್ನ ಶಿರವನವರ ಪಾದಕ್ಕೆ ಪೂಜೆಯ ಮಾಡುವೆನು
ಲಿಂಗದೇವನ ಶರಣನು
ಒಡಗೊಂಡು ಬಂದೆನ್ನ ಭವವ ಹರಿಯುವೆನು. –ಬವದೀ. 1084

ನನ್ನನ್ನು ಸ್ನೇಹದಿಂದ ಉಪಚರಿಸುವವರ ಸೇವೆಯನ್ನು ನಾನು ತನುವಿನಿಂದ ಮಾಡುತ್ತೇನೆ. ಮನಃಪೂರ್ವಕವಾಗಿ ಹಿತಬಯಸುವವರೆಗೆ ನಾನೂ ಅವರ ಹಿತಚಿಂತನೆ ಮಾಡುತ್ತೇನೆ. ಶರಣರ ಪಾದಕ್ಕೆ ನನ್ನ ಶಿರವನ್ನಿಟ್ಟು ನಮಸ್ಕರಿಸುತ್ತೇನೆ. ಏಕೆಂದರೆ ಲಿಂಗದೇವನ ಶರಣರು ಅಪಾರ ಜ್ಞಾನಿಗಳು, ಸದಾಚಾರ ಸಂಪನ್ನರು. ಅವರು ಜ್ಞಾನವನ್ನು ಒಡಗೊಂಡು ಬಂದು ನನ್ನ ಭವವನ್ನು ಅಜ್ಞಾನವನ್ನು ಹರಿಯುತ್ತಾರೆ.

1085. ಹೊಗಳಿಕೆ ಹೊನ್ನ ಶೂಲ

ಹೊಯಿದವರೆನ್ನ ಹೊರೆದವರೆಂಬೆ, ಬಯಿದವರೆನ್ನ ಬಂಧುಗಳೆಂಬೆ,
ನಿಂದಿಸಿದವರೆನ್ನ ತಂದೆತಾಯಿಗಳೆಂಬೆ, ಆಳಿಗೊಂಡವರೆನ್ನ ಆಳ್ದರೆಂಬೆ,

ಜರಿದವರೆನ್ನ ಜನ್ಮಬಂಧುಗಳೆಂಬೆ,
ಹೊಗಳಿದವರೆನ್ನ ಹೊನ್ನಶೂಲದಲ್ಲಿಕ್ಕಿದರೆಂಬೆ, ಲಿಂಗದೇವಾ. –ಬವದೀ. 1085

ಇದೊಂದು ಸುಪ್ರಸಿದ್ಧವಾದ ಅಷ್ಟೇ ಮಾರ್ಗದರ್ಶಕವಾಗಿರುವ ಜನಪ್ರಿಯ ವಚನ. ಸಾಮಾನ್ಯವಾಗಿ ಜನರು ಹೊಡೆಯುವವರನ್ನು, ಬೈಯುವವರನ್ನು ನಿಂದಿಸುವವರನ್ನು, ಮೂದಲಿಸುವವರನ್ನು, ಜರಿಯುವವರನ್ನು ಕಂಡರೆ ಕೋಪಗೊಳ್ಳುವರು. ಇಲ್ಲವೆ ಅವರಿಂದ ದೂರವಿರಲು ಯತ್ನಿಸುವರು. ಹೊಗಳುವವರನ್ನು ತುಂಬಾ ಪ್ರೀತಿಸುವರು. ಆದರೆ ಗುರು ಬಸವಣ್ಣನವರು ಅದಕ್ಕೆ ತದ್ವಿರುದ್ಧ. ಹೊಡೆಯುವವರು(ಹೊಯ್ಯುವವರು) ನಿಜವಾದ ರಕ್ಷಕರು ಎಂದು ತಿಳಿಯುವರು; ಶಿಕ್ಷಿಸಲ್ಪಡುವುದರಿಂದ ದೇಹವು ಗಟ್ಟಿಯಾಗುವುದಾದ ಕಾರಣ. ಬೈಯುವವರನ್ನು ಬಂಧುಗಳೆಂದು ತಿಳಿಯುತ್ತಾರೆ. ಏಕೆಂದರೆ ಅವರು ಮನೋಸಾಮರ್ಥ್ಯವನ್ನು ಬೆಳೆಸುತ್ತಾರೆ. ನಿಂದಿಸಿದವರನ್ನು ತಂದೆತಾಯಿಗಳೆಂದು ಗುರುಬಸವಣ್ಣನವರು ಭಾವಿಸುತ್ತಾರೆ. ಏಕೆಂದರೆ ನಿಂದಕರು ಓರೆಕೋರೆಗಳನ್ನು ತೋರಿಸುವ ಕೈಗನ್ನಡಿಯಂತೆ. ನಿಂದಕರು ನಿಂದಿಸಿದಾಗ ನಿಂದಿಸಲ್ಪಟ್ಟವರು ಆತ್ಮಾವಲೋಕನ ಮಾಡಿಕೊಂಡು ಅವರ ಮೇಲೆ ಮುನಿಯದೆ ತಮ್ಮ ಲೋಪ ದೋಷಗಳನ್ನು ತಿದ್ದಿಕೊಳ್ಳಬೇಕು. ಒಂದು ವೇಳೆ ಆ ನಿಂದೆ ಸತ್ಯವಿಲ್ಲದಿದ್ದರೆ ಸಮಾಧಾನವನ್ನು ತಾಳಬೇಕು. ಆಳಿಗೊಳ್ಳುವವರು ಎಂದರೆ ಮೂದಲಿಸುವವರು ಶಾಂತಿಗುಣವನ್ನು ಕಲಿಸುವರು. ಆದ್ದರಿಂದ ಅವರನ್ನು ನಿಜವಾದ ಒಡೆಯರು (ಆಳ್ದರು) ಎಂದು ಭಾವಿಸಬೇಕು. ಜರಿಯುವವರೂ ಅಷ್ಟೆ ಮನಸ್ಸಿಗೆ ಧೈರ್ಯದ ಪಾಠ ಕಲಿಸುವರು. ಹೊಗಳುವವರು ಒಂದು ರೀತಿಯಲ್ಲಿ ಪ್ರೋತ್ಸಾಹಿಸುವವರೇ ಆಗಿರುತ್ತಾರೆ. ಅವರ ನುಡಿಗಳು ಉರಿಯುವ ದೀಪಕ್ಕೆ ಎಣ್ಣೆಯನ್ನು ತೀವಿದಂತೆ. ಆದರೂ ಕೆಲವೊಮ್ಮೆ ಮುಖಸ್ತುತಿ ಮಾಡಿ ಓಲೈಸುವ ಹೊಗಳು ಭಟ್ಟಂಗಿಗಳಿಂದ ಸಾಧಕ ದಾರಿ ತಪ್ಪುವನು. ಅದಕ್ಕಾಗಿ ಗುರು ಬಸವಣ್ಣನವರು ಹೊಗಳುವವರು ಹೊನ್ನ ಶೂಲದಲ್ಲಿ ಇಕ್ಕುವರು ಎಂದು ಎಚ್ಚರಿಕೆ ವಹಿಸುತ್ತಾರೆ.

ಈ ವಚನವು ವೈಯಕ್ತಿಕ ಮತ್ತು ಕೌಟುಂಬಿಕ ಜೀವನದಲ್ಲಿ ಅಷ್ಟೇ ಅಲ್ಲ ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ದಾರಿ ದೀಪವಾಗುತ್ತದೆ. ಉನ್ನತ ಧ್ಯೇಯ ಹೊಂದಿ ಹೆಜ್ಜೆ ಇಟ್ಟ ಸಾಧಕನಿಗೆ ಮೂದಲಿಕೆ, ನಿಂದೆ, ಸಂಕಷ್ಟಗಳೇ ಬಹಳ. ಹೀಗಾಗಿ ಅನೇಕರು ನಿಂದೆ, ಎಡರು ತೊಡರು ಎದುರಿಸಲಾರದೆ ತಮ್ಮ ಧ್ಯೇಯಕ್ಕೆ ತಿಲಾಂಜಲಿ ಕೊಡುತ್ತಾರೆ. ಅಂಥ ಧ್ಯೇಯವಾದಿಗಳಿಗೆ ಈ ವಚನ ಧೈರ್ಯವನ್ನು ತುಂಬಿ ಆತ್ಮವಿಶ್ವಾಸವನ್ನು ನೀಡುತ್ತದೆ.

1086. ನಡೆ–ನುಡಿಯ ಸಮತೋಲನ

ದಿಟವ ನುಡಿವುದು, ನುಡಿದಂತೆ ನಡೆವುದು
ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲ ಲಿಂಗದೇವ. –ಬವದೀ. 1086

ಸತ್ಯವು ಕಠೋರವಾಗಿದ್ದರೂ ಸರಿ, ಅದನ್ನು ಹೇಳಬೇಕು. ತಾನು ಹೇಳಿದಂತೆ ಸತ್ಯದ ದಾರಿಯಲ್ಲಿ ನಡೆಯಬೇಕು. ದೊಡ್ಡ ದೊಡ್ಡ ಮಾತುಗಳನ್ನು ಆಡಿ ನಡೆಯಲ್ಲಿ ಮಾತ್ರ ತಪ್ಪುತ್ತ ಸಾಗಬಾರದು. ಹಲವು ಮಾತುಗಳನ್ನು ಆಡಿ, ನಂತರ ಹಾಗೆ ತಾನು ಮಾತನಾಡಿಲ್ಲವೆಂದು ಜಾರಿಕೊಳ್ಳುವ ಸುಳ್ಳುಗಾರಿಕೆ ಮತ್ತು ಮೌಲ್ಯಯುತ ಮಾತಾಡಿ ಅದಕ್ಕೆ ತಕ್ಕಂತೆ ನಡೆಯದೆ ಇರುವ ಪ್ರಾಪಂಚಿಕರನ್ನು ಲಿಂಗದೇವನು ಮೆಚ್ಚಿಕೊಳ್ಳನು.

1087. ಬಾಗುವುದು ವ್ಯಕ್ತಿತ್ವಕ್ಕೆ ಭೂಷಣ.

ಬೆಟ್ಟದ ಬಿದಿರೆ, ನೀನು ಅಟ್ಟಕ್ಕೇಣಿಯಾದೆ
ಕಾಲು ಮುರಿದವರಿಗೂರುಗೋಲಾದೆ

ಬಿದಿರಿಂ ಭೋ ಅಯ್ಯಾ, ಬಿದಿರಿಂ ಭೋ !
ಬಿದಿರಿದ ಫಲವುಂಬಡೆ ಬಿದಿರಿಂ ಭೋ !
ಬಿದಿರಲಂದಣವಕ್ಕು ; ಬಿದಿರೆ ಸತ್ತಿಗೆಯಕ್ಕು
ಬಿದಿರೆ ಗುಡಿಗುಡಾರವಕ್ಕು, ಬಿದಿರದವರ ಮೆಚ್ಚ ನಮ್ಮ ಲಿಂಗದೇವನು. –ಬವದೀ. 1087

ನಿಸರ್ಗದಲ್ಲಿರುವ ಪ್ರತಿಯೊಂದು ವಸ್ತುವು ಒಂದು ಆದರ್ಶವನ್ನು ಕಲಿಸುತ್ತದೆ. ಬೆಟ್ಟದಲ್ಲಿ ಬೆಳೆಯುವ ಬಿದಿರು ಎತ್ತರವಾದ ಅಟ್ಟವನ್ನೇರಲು ಬೇಕಾದ ಏಣಿಯಾಗಲು ಸಾಧನವಾಗುತ್ತದೆ. ಕಾಲು ಮುರಿದವರು ಊರಿಕೊಂಡು ನಡೆಯಲು ಊರುಗೋಲು ಆಗುವುದು. ಬಿದಿರಿನಿಂದ ಪಲ್ಲಕ್ಕಿಯನ್ನು ಮಾಡುವರು, ಛತ್ರಿಯನ್ನು ಮಾಡುವರು. ಬಾಗುವ ಗುಣವನ್ನು ಬಿದಿರು ಹೊಂದಿರುವುದರಿಂದ ಅಂದಣ, ಸತ್ತಿಗೆ ಮಾಡಲು (ಹುಲ್ಲಿನ)ಗುಡಿಗಳನ್ನು ಮಾಡಲು, ಗುಡಾರಗಳನ್ನು ನಿರ್ಮಿಸಲು ಬಿದಿರನ್ನು ಬಳಸಲಾಗುವುದು. ಆದ್ದರಿಂದ ಜನರೇ ವಿನಯದಿಂದ ಬಾಗುವ ಗುಣ ಕಲಿಯಿರಿ. ಆ ವಿನಯದ ಫಲವನ್ನು ನೀವು ಉಣ್ಣುವಿರಿ. ಸೌಜನ್ಯದಿಂದ ಬಾಗದೆ ಇರುವವರನ್ನು ಲಿಂಗದೇವನು ಇಷ್ಟಪಡುವುದಿಲ್ಲ.

1088. ಪರಸತಿಯನ್ನು ಬಯಸದಿರು.

ಅಸುರನೈಶ್ವರ್ಯವನೆಣಿಸುವಡೆ,
ಸೀತೆಗೆ ಸರಿಮಿಗಿಲೆನಿಸುವ ಸತಿಯರೆಂಟುಕೋಟಿ
ಮತಿವಂತ ಶಿರಃಪ್ರಧಾನರೆಂಟು ಕೋಟಿ;
ಲೆಕ್ಕವಿಲ್ಲದ ದಳವು, ಲಕ್ಷ ಕುಮಾರರು,
ದಿಕ್ಪಾಲಕರವನ ಮನೆಯ ಬಂಧನದಲ್ಲಿಪ್ಪರು.
ಸುರಪತಿಯರೆಲ್ಲರನಾತ ಸೆರೆಮಾಡಿ ಆಳಿದ.
ಶಿವನೆ, ನೀನು ಕರುಣಿಸಿದಂತಿರದೆ,
ಪರವಧುವಿನ ಬೇಟವವನ ಪ್ರಾಣವ ಕೊಂಡಿತ್ತು
ಇದನರಿದು ಪರವಧುಗಳಿಗೆಳಸುವರ ಕಂಡು
ಗರುಡನ ಕಂಡು ಸರ್ಪ ಧರೆಗಿಳಿವಂತೆ ಅಡಗಿಪ್ಪೆನಯ್ಯಾ ಲಿಂಗದೇವಾ! –ಬವದೀ. 1088

ಲಂಕೆಯ ಅಧಿಪತಿಯಾದ ರಾವಣನ ಬಹುಬಗೆಯ ಸಂಪತ್ತನ್ನು ಎಣಿಸುವುದು ಸಾಧ್ಯವಿಲ್ಲ. ಸುಂದರಿಯಾದ ಸೀತೆಗೆ ಸರಿಸಮಾನರಾದ ಅಂತಃಪುರದಲ್ಲಿದ್ದ ಹೆಂಗಸರು ಎಂಟುಕೋಟಿ. ಬುದ್ಧಿವಂತಿಕೆಯಿಂದ ಕೂಡಿದ ಆಸ್ಥಾನಿಕರು ಎಂಟುಕೋಟಿ. ಪದಾತಿ ಸೈನ್ಯ, ಲೆಕ್ಕವಿಲ್ಲದಷ್ಟು. ಯೌವ್ವನಿಗರಾದ ತರುಣರು ಲಕ್ಷಾಂತರ ಜನ. ಅಷ್ಟ ದಿಕ್ಪಾಲಕರನ್ನು ಆತ ಬಂಧನದಲ್ಲಿ ಇಟ್ಟಿದ್ದನು. ಸುರಪತಿಗಳನ್ನು ಆತ ಸೆರೆಯಲ್ಲಿಟ್ಟು ಆಳಿದ. ಇಂಥ ಧೀರನೂ, ಶೂರನೂ ಆದ ರಾವಣ ಶಿವನೆ ನೀನು ಇಟ್ಟಂತೆ ಇರದೆ ಪರಸತಿಯನ್ನು ಬಯಸಿದ. ಅದೇ ಅವನ ಪ್ರಾಣವನ್ನು ತೆಗೆದುಕೊಂಡಿತು.

ಇದನ್ನು ತಿಳಿದು ಪರಸತಿಯನ್ನು ಬಯಸುವುದತ್ತಲಿರಲಿ, ಪರಸತಿಯನ್ನು ಬಯಸುವವರನ್ನು ಕಂಡರೆ ನಾನೇ ನಡುಗಿ ಗರುಡನನ್ನು ಕಂಡ ಸರ್ಪ ಭೂಮಿಯನ್ನು ಅಪ್ಪಿಕೊಳ್ಳುವಂತೆ ನಾನು ಭಯದಿಂದ ಅಡಗಿಕೊಳ್ಳುತ್ತೇನೆ.

1089. ತ್ರಿಕಾಲ ಪೂಜೆ.

ಉದಯ ಮಧ್ಯಾಹ್ನ ಸಂಧ್ಯಾಕಾಲವ ನೋಡಿ
ಮಾಡುವ ಕರ್ಮಿ ನೀ ಕೇಳಾ.
ಉದಯವೆಂದೇನೋ ಶರಣಂಗೆ ?
ಮಧ್ಯಾಹ್ನವೆಂದೇನೋ ಶರಣಂಗೆ ?
ಅಸ್ತಮಾನವೆಂದೇನೋ ಶರಣಂಗೆ ?

ಮಹಾಮೇರುವಿನ ಮರೆಯಲ್ಲಿರ್ದು
ತಮ್ಮ ನೆರಳನರಸುವ ಭಾವಭ್ರಮಿತರ ಮೆಚ್ಚ
ನಮ್ಮ ಲಿಂಗದೇವರು.

ಈ ವಚನವನ್ನು ಓದಿದಾಗ ನಮಗೆ ಕೊಂಚ ಗೊಂದಲ ಉಂಟಾಗುವುದು. ಏಕೆಂದರೆ ಆದಿ ಶರಣರು ತ್ರಿಕಾಲ ಪೂಜೆ ಮಾಡುತ್ತಿದ್ದರು ಎಂದೇ ನಾವು ತಿಳಿದಿದ್ದೇವೆ. ಸಂಪ್ರದಾಯ ಮಠಾಧೀಶರು, ಪ್ರಸಾದ ದೀಕ್ಷೆ ಪಡೆದುಕೊಂಡವರು ಮೂರು ಹೊತ್ತು ಲಿಂಗಪೂಜೆ ಮಾಡುತ್ತಿರುವುದನ್ನು ನೋಡುತ್ತೇವೆ. (ಬಹಳಷ್ಟು ಸಮಯದವರೆಗೆ ಪೂಜ್ಯ ಅಪ್ಪಾಜಿಯವರು, ನಾನು ಸಹ ಮೂರು ಹೊತ್ತು ಲಿಂಗಪೂಜೆ ಮಾಡುತ್ತಿದ್ದೆವು. ನಾನು ಎಂ.ಎ. ಓದಲು ಆರಂಭಿಸಿದಾಗ ಮಧ್ಯಾಹ್ನದ ಪೂಜೆ ನಿಲ್ಲಿಸಬೇಕಾಯಿತು.) ಹೀಗಿದ್ದಾಗ ಧರ್ಮಗುರು ಬಸವಣ್ಣನವರು ತ್ರಿಕಾಲ ಪೂಜೆಯನ್ನು ಹೇಗೆ ಖಂಡಿಸುತ್ತಾರೆ ಎಂಬ ಸಂದೇಹ ಉಂಟಾಗುತ್ತದೆ.

ಈ ವಚನಕ್ಕೆ ಹೀಗೆ ಅರ್ಥಮಾಡಬಹುದು. ಯಾಂತ್ರಿಕವಾಗಿ ಮಾಡುವ ಪೂಜೆಯ ಪರಿ ಬೇರೆ; ಆಧ್ಯಾತ್ಮಿಕ ಆನಂದವನ್ನು ಹೊಂದುತ್ತ ಮಾಡುವ ಪೂಜೆಯ ಪರಿ ಬೇರೆ. ಯಾಂತ್ರಿಕವಾಗಿ ಮಾಡುವವರು ಆನಂದಾನುಭೂತಿಗಾಗಿ ಮಾಡದೆ ಒಂದು ಸಾಂಪ್ರದಾಯಿಕ ಕ್ರಿಯೆ ಎಂದು (ಕಾಟಾಚಾರಕ್ಕೆ)ಮಾಡುವರು. ಆನಂದಾನುಭೂತಿಗಾಗಿ ಮಾಡುವವರು ಸಮಯದ ಪರಿವೆ ಇಲ್ಲದೆ ಕುಳಿತುಬಿಡುವರು. ಉದಯದಲ್ಲಿ ಕುಳಿತವನು ಮಧ್ಯಾಹ್ನದವರೆಗೂ ಕುಳಿತಿರಬಹುದು. ರಾತ್ರಿ ಕುಳಿತವನು ಊಟನಿದ್ರೆಗಳ ಪರಿವೆ ಇಲ್ಲದೆ ಮರುದಿನ ಬೆಳಗ್ಗೆವರೆಗೆ ಕುಳಿತುಬಿಡಬಹುದು. ಮಹಾಮೇರುವಿನ ಮರೆಯಲ್ಲಿ ಅಂದರೆ ಅದರ ನೆರಳಲ್ಲಿ ಇರುವವರಿಗೆ ತನ್ನ ನೆರಳು ತೋರಲು ಸಾಧ್ಯವಿಲ್ಲ. ಅದೇ ರೀತಿ ಪರಮಾತ್ಮ ಲಿಂಗದೇವನ ಆನಂದದಲ್ಲಿ ತನ್ಮಯನಾದವನಿಗೆ ಬೆಳಿಗ್ಗೆ, ಮಧ್ಯಾಹ್ನ ಅಸ್ತಮಾನ ಎಂಬ ವಿಂಗಡಣೆ ಇರುವುದಿಲ್ಲ.

1090. ಪಕ್ಷ ಹೋರಾಟದಲ್ಲಿ ಛಲ.

ಸದಾಚಾರವ ಕಂಡು ಲಾಂಛನಪಕ್ಷವನಾಡದವರಿಗೆ,
ಇಹದೊಳು ಪರದೊಳು ಗತಿಯಿಲ್ಲ ಕಾಣಿರೋ
ಮಣ್ಣೆತ್ತಾದಡೇನು ತನ್ನೆತ್ತು ಗೆಲ್ಲಬೇಕೆಂಬುದಕ್ಕೊಲಿವ
ನಮ್ಮ ಲಿಂಗದೇವಯ್ಯ

ಸಂಘಟನಾತ್ಮಕ ಹೋರಾಟ ಬಹಳ ಮುಖ್ಯ. ಅನೇಕ ಸಾತ್ವಿಕ, ಧಾರ್ಮಿಕರು ತಮಗೇಕೆ ಗದ್ದಲ ಎಂದು ಸಾಮಾಜಿಕ ಹೋರಾಟಗಳಿಂದ ದೂರ ಇರುವರು. ಇದನ್ನು ಗುರು ಬಸವಣ್ಣನವರು ಟೀಕಿಸುವರು. ಧಾರ್ಮಿಕರು ದುರಾಚಾರ, ದೌರ್ಜನ್ಯಗಳನ್ನು ಬೆಂಬಲಿಸಬಾರದು, ಪ್ರೋತ್ಸಾಹಿಸ ಬಾರದು. ಆದರೆ ಸದಾಚಾರವನ್ನು, ಸತ್ಯವನ್ನು ಬೆಂಬಲಿಸದಿದ್ದರೆ ಹೇಗೆ? ಸದಾಚಾರಿಗಳಾದವರ ಲಾಂಛನ ಕಂಡು ಅವರ ಪಕ್ಷವನ್ನು ಬೆಂಬಲಿಸಬೇಕು. ಸಾತ್ವಿಕರು ಸಂಘಟನಾತ್ಮಕ ಹೋರಾಟ ಮಾಡದೆ ಇದ್ದರೆ "ಇಹದೊಳು ಗತಿ ಇಲ್ಲ, ಪರದೊಳು ಗತಿ ಇಲ್ಲ." ಇಹದಲ್ಲಿ (ಈಗಿನ ಲಿಂಗಾಯತ ಸಮಾಜದಂತೆ) ಅನೈಕ್ಯತೆ, ಅಸಂಘಟನೆಯಿಂದ ಛಿದ್ರವಾದ ಸ್ಥಿತಿಯಲ್ಲಿ ಇರುತ್ತದೆ. ಇನ್ನು ಪಾರಮಾರ್ಥಿಕವಾಗಿ ತಮ್ಮ ಧರ್ಮವನ್ನು ಉಳಿಸಿಕೊಳ್ಳಲಾಗುವುದಿಲ್ಲ.

(ಒಬ್ಬ ವಿದ್ವಾಂಸ ಹೇಳುತ್ತಾನೆ. ಲಿಂಗಾಯತ ಸಮಾಜ ತನ್ನ ತತ್ವ, ನಂಬಿಕೆ, ಆಚಾರ-ವಿಚಾರಗಳಿಂದ ಹಿಂದು ಸಮಾಜದ ಸಮುದ್ರದಲ್ಲಿ ಒಂದು ದ್ವೀಪದಂತೆ ಇದೆ. ಆದರೆ ಅದು ನಿಧಾನವಾಗಿ ಹಿಂದು ಸಮಾಜ ಸಮುದ್ರದಲ್ಲಿ ಕರಗಿ ಹೋಗುತ್ತಲಿದೆ. ಇಂದಿನ ಬಹುಪಾಲು ಲಿಂಗಾಯತರು ತಮ್ಮ ಧಾರ್ಮಿಕ ಸಂವಿಧಾನ ವಚನ ಸಾಹಿತ್ಯವು ನಿಷೇಧಿಸಿರುವ ಹೋಮ ಹವನ, ಯಜ್ಞ-ಯಾಗ, ಬಹುದೇವತೋಪಾಸನೆ, ಮುಹೂರ್ತ-ಜಾತಕ, ಗ್ರಹಣ-ಶಾಂತಿ

ಇವೆಲ್ಲಕ್ಕೆ ಪಕ್ಕಾಗಿರುವುದರಿಂದ ಲಿಂಗಾಯತ ಧರ್ಮ-ಸಮಾಜಗಳು ಕರಗಿ ಹೋಗುತ್ತಿರುವ ದ್ವೀಪ ದಂತಾಗಿವೆ ಎಂದರೆ ಉತ್ಪ್ರೇಕ್ಷೆಯಾಗದು.)

ಮಕ್ಕಳು ಮಣ್ಣೆತ್ತು (ಮಣ್ಣಿನಲ್ಲಿ ಮಾಡಿದ ಎತ್ತಿನ ಗೊಂಬೆ)ಮಾಡಿಕೊಂಡು ಆಟವಾಡು ತ್ತಿರುತ್ತಾರೆ. ತಮ್ಮ ಎತ್ತನ್ನ ಓಡಿಸಬೇಕೆಂದು ಹೇಗೆ ಪ್ರಯತ್ನಿಸುವರೋ ಹಾಗೆ ನಮ್ಮ ಪಕ್ಷ (ಧರ್ಮ) ಗೆಲ್ಲಬೇಕೆಂದು ನಾವು ಹೋರಾಡಬೇಕು. ಇಂಥ ಛಲವಿದ್ದಾಗ ಲಿಂಗದೇವಯ್ಯನು ಒಲಿಯುವನು. ಇದೇ ಗಣಾಚಾರ.

1091. ಆಳಿನ ಪರಿಸ್ಥಿತಿ ಕಷ್ಟದಾಯಕ.

ಕೇಳುವ ದೊರೆಗಳ ಮುಂದೆ ಹೇಳುವ ಆಳುಗಳಂಗ ಕದ್ದಡೆ
ಅದು ಅಂಗಮರ್ದನಕ್ಕೆ ಕಾರಣ, ಅದು ಮುಚ್ಚಿದ ಗೊಬ್ಬರದಗ್ನಿ
ಇದು ಕಾರಣ-
ಹೇಳದಿದ್ದಡೆ ಅರಿಯನೆಂತಲ್ಲ ; ಹೇಳಿದಡೆ ಅರಿತನೆಂತಲ್ಲ
ತನ್ನ ಭಕ್ತರು ಸರಸರೊ, ವಿರಸರೊ?
ತನ್ನ ಭಕ್ತರು ಮಾನಿಗಳೊ, ಮದವಿಹೀನರೊ
ಎಂಬ ಬಗೆ ಕಾಣಾ, ಲಿಂಗದೇವ.

ಈ ವಚನ ಸರಿಯಾಗಿ ಅರ್ಥವಾಗುತ್ತಲಿಲ್ಲ ಮತ್ತು ವಿಶೇಷ ಸಂದೇಶವನ್ನು ನೀಡುತ್ತಲಿಲ್ಲ. ಕಷ್ಟಪಟ್ಟು ಅರ್ಥಮಾಡಲು ಯತ್ನಿಸೋಣ. ರಾಜರ ಅರಮನೆಯಲ್ಲಿ ಕಳ್ಳತನವಾದಡೆ ಆಳುಗಳ ಅಂಗಮರ್ದನ ನಿಶ್ಚಿತ. ಗೊಬ್ಬರದೊಳಗಣ ಅಗ್ನಿ ಒಳಗೇ ತಿಪ್ಪೆಯನ್ನು ಸುಡವಂತಹ ವಾತಾವರಣ ನಿರ್ಮಾಣವಾಗಿರುತ್ತದೆ. ಕಳ್ಳರು ಯಾರು ಎಂದು ಗೊತ್ತಿದ್ದರೂ ಹೇಳುವುದು ಕಷ್ಟಕರ. ಹೀಗಾಗಿ ಶರಣರು ಮಾನಿಗಳಾದ ಕಾರಣ ಅಂಥಲ್ಲಿ ಕೆಲಸ ಮಾಡುವುದು ಕಷ್ಟಕರ. ಏಕೆಂದರೆ ರಾಜರ ಮನೆಯಲ್ಲಿ ಸರಸವೂ ಕಷ್ಟ. ವಿರಸವೂ ಕಷ್ಟ.

1092. ತೋರಿಕೆಯ ವಿನಯ

ಸಮಯ ವಿರುದ್ಧಕಂಜಿ ವಿನಯವ ನುಡಿವೆ
ಕೊಂದಡೆ ಕೊಲ್ಲು, ಕಾಯ್ದಡೆ ಕಾಯಿ
ಎನ್ನವರೆಂದು ಮನ ಹಿಡಿಯದಯ್ಯ ಲಿಂಗದೇವಾ.

ಕೆಲವೊಮ್ಮೆ ವಿರೋಧಿಗಳು ಸುತ್ತಲೂ ಕವಿಯುತ್ತಾರೆ. ಆಗ ಸಂದರ್ಭಕ್ಕೆ ಅನುಸಾರವಾಗಿ ವ್ಯಕ್ತಿ ಉಪಾಯವನ್ನು ಮಾಡಬೇಕಾಗುತ್ತದೆ. ಅತ್ಯಂತ ವಿನಯಭಾವದಿಂದ ಅವರೆಂದಂತೆ ಅಂದು ಅಲ್ಲಿಂದ ತಪ್ಪಿಸಿಕೊಳ್ಳಬೇಕಾಗುತ್ತದೆ. ಲಿಂಗದೇವಾ, ಇದು ತಪ್ಪೋ ಒಪ್ಪೋ ನಾನರಿಯೆ, ಕೊಲ್ಲುವುದೂ ಕಾಯುವುದು ನಿನಗೆ ಬಿಟ್ಟಿದ್ದು. ತತ್ಕಾಲದ ಉಪಾಯವಾಗಿ ಹಾಗೆ ಮಾಡಿದರೂ ಆ ವಿರೋಧಾಭಿಪ್ರಾಯದವರನ್ನು ನನ್ನವರು ಎಂದು ನನ್ನ ಮನಸ್ಸು ಒಪ್ಪದು. ಅವರ ವಿಚಾರವನ್ನು ನನ್ನ ಅಂತರಾತ್ಮ ಒಪ್ಪದು. ಇದು ಸತ್ಯ! ಎನ್ನುತ್ತಾರೆ ಗುರು ಬಸವಣ್ಣನವರು. ಇಲ್ಲಿ ಒಂದು ಬಗೆಯ ರಾಜನೀತಿಯನ್ನು ಗುರು ಬಸವಣ್ಣನವರು ಕಲಿಸುತ್ತಾರೆ. ರಾಜರು ಶತ್ರುಗಳ ಕೈಗೆ ಸೆರೆ ಸಿಕ್ಕುವ ಸನ್ನಿವೇಶ ಒದಗಿದರೆ, ಛದ್ಮ ವೇಷಧರಿಸಿ ಗುಪ್ತ ಮಾರ್ಗದಿಂದ ತಪ್ಪಿಸಿಕೊಳ್ಳಲು ಎಳೆಸುವರು. ಮೊದಲು ಜೀವ ಉಳಿಸಿಕೊಳ್ಳಬೇಕು. ಓಡಿ ಹೋಗುವುದು ಹೇಡಿತನ ಎಂದು ಶತ್ರುವಿನ ಎದುರು ನಿಲ್ಲಬಾರದು. ಈ ರಾಜನೀತಿ ಮೇಲ್ಕಂಡ ವಚನದಲ್ಲಿ ಅಭಿವ್ಯಕ್ತವಾಗಿದೆ.

1093. ಸತ್ಯ ನುಡಿಯಲು ಅಂಜುವುದಿಲ್ಲ.

ನಿಜವಾದ ನುಡಿಯಲ್ಲಿ
ನೀ ನುಡಿದಡಂಜೆ, ಮಡಿವಾಳಯ್ಯ ನುಡಿದಡಂಜೆ,

ಮೇಲಿನ ಜಗದಯ್ಯ ನುಡಿದಡಂಜೆ
ಭಕ್ತಿ ನಿಮಿತ್ತ ಏನಾಡಿದೆನೊ ಏನಿಲ್ಲವೊ.
ಇನ್ನಾಡುವ ವಿಗಡ ವಿರಸದ ನುಡಿ ಆಲಿಸಯ್ಯಾ,
ಲಿಂಗದೇವಯ್ಯ

"ಸತ್ಯವನ್ನು ನುಡಿಯುವ ದಿಶೆಯಲ್ಲಿ ನಾನು ಯಾರಿಗೂ ಅಂಜೆ. ನೀನೇ ಮಾತನಾಡಲಿ(?) ಮಡಿವಾಳಯ್ಯನವರೇ ಹೇಳಲಿ, ಸಾಕ್ಷಾತ್ ಜಗದಯ್ಯನಾದ ದೇವರೇ ಹೇಳಲಿ ನಾನು ಅಂಜುವುದಿಲ್ಲ. ಭಕ್ತಿಯ ನಿಮಿತ್ತವಾಗಿ ನಾನು (ವಾದ ಮಾಡುವಾಗ) ಏನೇನು ಮಾತನಾಡಿದೆನೋ ತಿಳಿಯದು ಆದರೆ ಇನ್ನು ಮುಂದೆ ಆಡುವ ವಿರಸ ಮತ್ತು ವಿಡಂಬನೆಗಳು ಹೇಗಿರುತ್ತವೆ ನೋಡಿರಿ." ಗುರು ಬಸವಣ್ಣನವರು ಸತ್ಯವನ್ನು ನುಡಿಯಲು ಅಂಜುತ್ತಿರಲಿಲ್ಲ. ವಾದ ಮಾಡುವಾಗ ಹಿಂಜರಿಯುತ್ತಿರಲಿಲ್ಲ. "ಛಲಬೇಕು ಶರಣಂಗೆ ಪರವಾದಿ ನಿಗ್ರಹದಲ್ಲಿ" ಎಂಬ ದೃಷ್ಟಿಕೋನ ಅವರದು. ವಾದ ಮಾಡುವಾಗ ಕೋಪ-ವಿರಸ, ವ್ಯಂಗ್ಯ-ವಿಡಂಬನೆ ಮುಂತಾಗಿ ನುಸುಳಬಹುದು. ಅವು ಸಹಜ. ಅವನ್ನು ತಾಳಿಕೊಳ್ಳಬೇಕು, ಅವು ಕ್ಷಮ್ಯ ಎಂಬುದು ಅವರ ವಾದ.

1094. ದುರ್ಗುಣ ನಾಶ ಅಗತ್ಯ

ಆವ ಯೋಗವ ನಡೆಸಿದಡೇನು ; ಆವ ಪೂಜೆಯ ರಚಿಸಿದಡೇನು,
ದುರ್ಗುಣ ಬಿಟ್ಟಲ್ಲದೆ ಲಿಂಗ ಸಾಧ್ಯವಾಗದು
ಆಡಿದ ನುಡಿ ಹುಸಿಯೆಂದಡೆ
ಲಿಂಗದೇವ ದೂರ ದೂರ ಕಾಣಾ ಪ್ರಭುವೆ.

ಯಾವ ಯೋಗದ ಅಭ್ಯಾಸ ಮಾಡಿದರೇನು? ಯಾವ ಪೂಜೆಯನ್ನು ಎಷ್ಟೆಷ್ಟು ಹೊತ್ತು ಮಾಡಿದ್ದರೇನು? ದುರ್ಗುಣಗಳನ್ನು ಬಿಡದಿದ್ದರೆ ಲಿಂಗದೇವನ ಒಲುಮೆ ಸಾಧ್ಯವಾಗದು. ಅದರಲ್ಲೂ ಸುಳ್ಳು ಹೇಳುವಿಕೆ ಅತ್ಯಂತ ಕೆಟ್ಟಗುಣ. ಒಮ್ಮೆ ಮಾತನಾಡಿ ನಂತರ ತಾನು ಹಾಗೆ ಹೇಳಿಯೇ ಇಲ್ಲ ಎಂದು ವಾದಿಸುವುದು ತೀರಾ ನೀಚಗುಣ. ಇಂಥವರಿಂದ ಲಿಂಗದೇವನು ಬಹುದೂರವಿರುವನು.

1095. ಅನುಭಾವ ಎಲ್ಲರಿಗೆ ಇಲ್ಲ.

ಸಮತೆ ಸನ್ಮಾನದಿಂದ ನಿಜ ಗುರುಕಾರುಣ್ಯದಿಂದ
ಸತ್ವರಜಸ್ತಮದ ಕ್ರೋಧವಳಿಯದನ್ನಕ್ಕರ
ಅನುಭಾವವೆಲ್ಲಿಯದೋ ?
ಅರಿಷಡ್ವರ್ಗ ದಶವಾಯುಗಳ ವಿಕಳಪಾನ ಬಿಡದನ್ನಕ್ಕರ
ಅನುಭಾವವೆಲ್ಲಿಯದೋ ?
ಮದ, ಮತ್ಸರ, ವೈತಾಳ ಸಂಪಾದವಲ್ಲದೆ
ಅನುಭಾವವೆಲ್ಲಿಯದೋ ?
ಸಮತೆ ಸಜ್ಜನಿಕೆ ಸಮಯಾಚಾರದ ನಿಜಪದವು
ದುರಾಚಾರಿಗಳಿಗಳವಡವುದೆ ?
ನಮ್ಮ ಲಿಂಗದೇವನ ಶರಣರಿಗಲ್ಲದೆ
ಅನುಭಾವವೆಲ್ಲರಿಗೆಲ್ಲಿಯದೋ ?

ಜ್ಞಾನಿಯಾದವನಲ್ಲಿ ಕ್ರೋಧವು ಅಳಿಯಬೇಕು. ಚಿತ್ತಸಮತೆ(**Equanimity of mind**)ಯು ತನಗೆ ಸಿಗುವ ಸನ್ಮಾನ ಮತ್ತು ಗುರುಕಾರುಣ್ಯದಿಂದಾಗಿ ಅಳವಡಬೇಕು. ಕೋಪವು ಸಾತ್ವಿಕ, ರಾಜಸಿಕ, ತಾಮಸಿಕ ಮೂರೂ ದೃಷ್ಟಿಯಿಂದ ಅಳಿಯಬೇಕು. ತಾಮಸ ಕೋಪ ಚರ್ಮದ ಮೇಲೆ ಎಳೆಸ ಬರೆಯಂತೆ, ರಾಜಸ ಕೋಪ ಕಲ್ಲಿನ ಮೇಲೆ ಎಳೆದ ಗೆರೆಯಂತೆ. ಸಾತ್ವಿಕ ಕೋಪವು ಉಸುಕಿನ ಮೇಲೆ ಎಳೆದ ಗೆರೆಯಂತೆ. ಒಟ್ಟಾರೆ ಕೋಪವು ಶರೀರ -ಮನಸ್ಸುಗಳ ಮೇಲೆ ಪರಿಣಾಮ

ಬೀರುವ ಕಾರಣ ಅದನ್ನು ಗೆಲ್ಲಬೇಕು. ಇಲ್ಲದಿದ್ದರೆ ಲಿಂಗದೇವನ ದಿವ್ಯಾನುಭವವು ಅಳವಡುವುದಿಲ್ಲ.

ಆತ್ಮಸ್ತುತಿ ಎಂದರೆ ಸ್ವಪ್ರಶಂಸೆ, ಪರನಿಂದೆ, ಮತ್ತೊಬ್ಬರನ್ನು ಕಂಡು ಅಸಹ್ಯ ಪಡುವುದು, ಸುಳ್ಳು, ವಿತಂಡವಾದ ಇವು ಇದ್ದರೆ ಲಿಂಗದೇವನ ದಿವ್ಯಾನುಭವವು ಸಿದ್ಧಿಸದು. ಕಾಮಕ್ರೋಧ ಲೋಭಮೋಹಮದಮತ್ಸರ ಎಂಬ ಅರಿಷಡ್ವರ್ಗಗಳ ಚಟುವಟಿಕೆ, ದಶಪ್ರಾಣಗಳ ಸಹಜ ಕ್ರಿಯೆಗಳಲ್ಲದ ವಿಕಾರಗೊಂಡ ಕ್ರಿಯೆ ಇದ್ದರೆ ದೇವನ ದಿವ್ಯಾನುಭವ ಹೇಗೆ ಸಾಧ್ಯ?

ಮದ, ಮತ್ಸರ, ಬೇತಾಳ ವಿದ್ಯೆ ಮುಂತಾದ ಪೈಶಾಚಿಕವಿದ್ಯೆ ಅಡಗದ ಹೊರತು ಅನುಭಾವವು ಅಳವಡದು. ಸಮತೆ, ಸಜ್ಜನಿಕೆ, ಸಮಯಾಚಾರ ದುರಾಚಾರಿಗಳಿಗೆ ಅಳವಡುವುದಿಲ್ಲ. ಇವನ್ನೆಲ್ಲ ಅಳವಡಿಸಿಕೊಂಡ ಲಿಂಗದೇವನ ಶರಣರಿಗೆ ಮಾತ್ರ ಅನುಭಾವ ಅಳವಡುವುದು.

1096. ತಮ್ಮನೆ ಮೆರೆದರು, ನಿಮ್ಮ ಮೆರೆದುದಿಲ್ಲ.

ಓದಿನ ಹಿರಿಯರು, ವೇದದ ಹಿರಿಯರು, ಶಾಸ್ತ್ರದ ಹಿರಿಯರು,
ಪುರಾಣದ ಹಿರಿಯರು, ವೇಷದ ಹಿರಿಯರು, ಭಾಷೆಯ ಹಿರಿಯರು !
ಇವರೆಲ್ಲರು ತಮ್ಮ ತಮ್ಮನೆ ಮೆರೆದರಲ್ಲದೆ ನಿಮ್ಮ ಮೆರೆದುದಿಲ್ಲ
ತಮ್ಮ ಮರೆದು ನಿಮ್ಮ ಮೆರೆದಡೆ ಕೂಡಿಕೊಂಡಿಪ್ಪ
ನಮ್ಮ ಲಿಂಗದೇವರು.

ಇದು ಬಹಳ ಮಹತ್ವಪೂರ್ಣವಾದ ವಚನ. ಬಹಳಷ್ಟು ಓದಿಕೊಂಡ ಹಿರಿಯರು, ವೇದಗಳನ್ನು ಅರೆದು ಕುಡಿದ ಹಿರಿಯರು, ಶಾಸ್ತ್ರಗಳಲ್ಲಿ ಬಲ್ಲಿದರಾದವರು, ಪುರಾಣಗಳಲ್ಲಿ ಪ್ರವೀಣರಾದ ಹಿರಿಯರು, ಪಟ್ಟೆ ಪೀತಾಂಬರ ಉಟ್ಟುಕೊಂಡು, ಕಿರೀಟ ಧರಿಸಿಕೊಂಡು ಆಡಂಬರದ ವೇಷಭೂಷಣ ಹಾಕಿಕೊಳ್ಳುವ ಹಿರಿಯರು, ಬಹುಬಗೆಯ ಭಾಷೆಗಳನ್ನು ಮಾತನಾಡುವ ಹಿರಿಯರು- ಇವರೆಲ್ಲರು ತಮ್ಮ ತಮ್ಮನೆ ಮೆರೆಸಿಕೊಂಡರಲ್ಲದೆ ದೇವರನ್ನು ಮೆರೆಸಲಿಲ್ಲ. ಉದಾಹರಣೆಗೆ ರಾಮ, ಕೃಷ್ಣರು. ಅವರು ತಾವೇ ದೇವರೆಂದು, ತಮಗೇ ಶರಣಾಗಬೇಕೆಂದು ಹೇಳಿದರು. ಗುರು ಬಸವಣ್ಣನವರು ದೇವರ ಮಹಿಮೆಯನ್ನು ಕೊಂಡಾಡಿ ಮೆರೆಸಿದರೇ ವಿನಾ ತಮ್ಮನ್ನು ತಾವು ವೈಭವಿಸಿಕೊಳ್ಳಲಿಲ್ಲ. ಅದಕ್ಕಾಗಿಯೇ ಅವರು ಹೇಳುವರು. "ತಮ್ಮ ಮರೆದು ನಿಮ್ಮ ಅಂದರೆ ದೇವರನ್ನು ಮೆರೆಸಿದರೆ ಅಂಥವರಿಗೆ ಲಿಂಗದೇವನು ಒಲಿಯುವನು." ಎಂದು. ನಮ್ಮ ದೇಶದಲ್ಲಿ ಬಹಳಷ್ಟು ಜನ ಬಾಬಾಗಳು, ಪವಾಡ ಪುರುಷರ ಹುಟ್ಟುತ್ತಾರೆ. ದೇವರೆಡೆಗೆ ಜನರನ್ನು ತಿರುಗಿಸುವುದಕ್ಕಿಂತಲೂ ತಮ್ಮನ್ನು ವೈಭವೀಕರಿಸಿಕೊಂಡು ತಮ್ಮ ಕಡೆಗೆ ಜನರನ್ನು ಆಕರ್ಷಿಸಲು ಪ್ರಯತ್ನಿಸುತ್ತಾರೆ. ಇದನ್ನು ಗುರು ಬಸವಣ್ಣನವರು ಇಷ್ಟಪಡುವುದಿಲ್ಲ

ಕ್ರೈಸ್ತ, ಇಸ್ಲಾಂ ಧರ್ಮಗಳಲ್ಲಿ ಒಬ್ಬ ದೇವನನ್ನು ನಂಬಿ ಅವನನ್ನು ಪರಮೋಚ್ಚ ಸ್ಥಾನದಲ್ಲಿರಿಸಿ ಕೊಂಡಾಡುತ್ತಾರೆ. ಅಂಥ ನಿಷ್ಠೆಯನ್ನು ಭಾರತ ದೇಶದಲ್ಲಿ ಕೇವಲ ಲಿಂಗಾಯತ ಮತ್ತು ಸಿಖ್ ಧರ್ಮದಲ್ಲಿ ಕಾಣಬಹುದು.

1097. ಲಿಂಗಭಕ್ತನಾಗುವುದು ಎಲ್ಲಕ್ಕಿಂತ ಶ್ರೇಷ್ಠ.

ಅಕ್ಷರ, ಗಣಿತ, ಗಂಧರ್ವ, ಜ್ಯೋತಿಷ,
ತರ್ಕ, ವ್ಯಾಕರಣ, ನಿಘಂಟು, ಸಾಲಿಹೋತ್ರ, ಛಂದಸ್ಸು,
ಗ್ರಹವಾದ, ಗಾರುಡ, ದ್ಯೂತ, ವೈಶಿಕಶಾಸ್ತ್ರ
ಸಾಮುದ್ರಿಕ ಶಾಸ್ತ್ರ, ಅಶ್ವಶಿಕ್ಷೆ, ಗಜಶಿಕ್ಷೆ ಗೋಕರ್ಣದಾಡಾಬಂಧ
ಮೂಲಿಕಾಸಿದ್ಧಿ, ಭೂಚರತ್ವ, ಖೇಚರತ್ವ,
ಅತೀತ, ಅನಾಗತ, ವರ್ತಮಾನ, ಸ್ಥೂಲ, ಸೂಕ್ಷ್ಮ
ಇಂದ್ರಜಾಲ, ಮಹೇಂದ್ರಜಾಲ, ಒಡ್ಯಾನಬಂಧಚೇಷ್ಟೆ,

ಪರಕಾಯ ಪ್ರವೇಶ, ದೂರದೃಷ್ಟಿ, ದೂರಶ್ರವಣ
ಋಗ್ಯಜುಸ್ಸಾಮಾರ್ಥರ್ವಣಾದ್ಯನೇಕ ಶ್ರುತಿಸ್ಮೃತಿ
ಪುರಾಣೇತಿಹಾಸಾದಿ ಆಯುರ್ಧರ್ಶಿ ನೈಷ್ಟಿಕಾಮುಷ್ಟಿಚಿಂತನೆ
ಚೋರವಿದ್ಯೆ, ಅಮೃತೋದಯ, ಭಾಷಾಪರೀಕ್ಷೆ,
ವೀಣಾವಿದ್ಯೆ, ಶಸ್ತ್ರವಿದ್ಯೆ, ಧನುರ್ವಿದ್ಯೆ,
ಡೊಂಬವಿದ್ಯೆ, ಅಗ್ನಿಸ್ತಂಭ, ಜಲಸ್ತಂಭ, ವಾಯುಸ್ತಂಭ
ವಾದವಶ್ಯ, ಅಂಜನಸಿದ್ಧಿ, ಘಟಿಕಾಸಿದ್ಧಿ, ಮಂತ್ರಸಿದ್ಧಿ, ತಂತ್ರಸಿದ್ಧಿ,
ಇವೆಲ್ಲವಂ ಕಲಿತಡೇನು ?
ಚೌಷಷ್ಟಿವಿದ್ಯಾಕಲಾಪ್ರವೀಣನೆನಿಸಿಕೊಂಬನಲ್ಲದೆ
ಲಿಂಗಭಕ್ತನೆನಿಸಿಕೊಂಬುದಿಲ್ಲ ?
ಲಿಂಗವುಳ್ಳ ನಿಜಶರಣಂಗೆ ಇವರೆಲ್ಲರು ಸಮಬಾರರಯ್ಯಾ
ಸಹಜ ಸದ್ಭಕ್ತಿಯಿಲ್ಲದವರನೊಲ್ಲ ನಮ್ಮ ಲಿಂಗದೇವರು. -ಬವದೀ. 1096

ಮೇಲೆ ತಿಳಿಸಿದ ಲೌಕಿಕ ವಿದ್ಯೆಗಳಲ್ಲಿ ಪ್ರವೀಣನಾದರೆ 64 ವಿದ್ಯಾಪ್ರವೀಣ ಎನಿಸಿಕೊಳ್ಳುವನಲ್ಲದೆ ದೇವಭಕ್ತ ಎನ್ನಿಸಿಕೊಳ್ಳಲಿಲ್ಲ. ಸೃಷ್ಟಿಕರ್ತ ಲಿಂಗದೇವನನ್ನು ನಂಬಿ ಇಷ್ಟಲಿಂಗಧಾರಿಯಾಗುವುದು ಎಲ್ಲಕ್ಕಿಂತಲೂ ಶ್ರೇಷ್ಠ. ಇವನಿಗೆ ಇನ್ನಾರೂ ಸಮಬಾರರು. ಸದ್ಭಕ್ತಿ, ಶರಣಾಗತಿ ಇಲ್ಲದವರಿಗೆ ಲಿಂಗದೇವನು ಒಲಿಯನು.

1098. ಲಿಂಗಭಕ್ತನಾಗುವುದು ಎಲ್ಲಕ್ಕಿಂತ ಶ್ರೇಷ್ಠ.

ವಚನಾನುಭಾವವ ಮಾಡುವಯ್ಯಗಳಿರಾ
ನಿಮಗೆ ವಚನ ಪ್ರಾಣಲಿಂಗವೊ, ಅಲ್ಲ ದಾಸೋಹ ಪ್ರಾಣಲಿಂಗವೋ ?
ಆರೂಢವನೆ ಕಲಿತು ಅಂಗಸಂಗದಲ್ಲಿಪ್ಪಯ್ಯಗಳಿರಾ
ಆರೂಢ ಪ್ರಾಣಲಿಂಗವೊ, ಅಲ್ಲ, ದಾಸೋಹ ಪ್ರಾಣಲಿಂಗವೊ ?
ಬ್ರಹ್ಮವಿದ್ಯೆಯನೆ ಕಲಿತು ಭ್ರಮೆಯೆಂಬ ಶೂಲದ ಮೇಲೆ ಕುಳ್ಳಿರ್ದು
ಆ ಬ್ರಹ್ಮವಿದ್ಯೆಯೆ ಪ್ರಾಣಲಿಂಗವೊ, ಅಲ್ಲ
ದಾಸೋಹದ ಪ್ರಾಣಲಿಂಗವೋ ?
ಎಲ್ಲ ಮಾತುಗಳ ಹಲ್ಲಣಿಸಿಕೊಂಡು ಬಲುಹುಲಿಯ
ಬೆನ್ನಲ್ಲಿ ಬಪ್ಪ ತೆರನಂತೆ
ಬಲ್ಲವರಿಗೆ ಬಲ್ಲವರು ನಮ್ಮ ಜಂಗಮದಾಸೋಹಿಗಳು
ಲಿಂಗದೇವರರಿತಡೆ ನಿಮ್ಮ ಹಲ್ಲ ಕಳೆವ ಕಾಣಿರೆ !

ದಾಸೋಹ ಎಂದರೆ ಗುರು-ಲಿಂಗ-ಜಂಗಮಾರಾಧನೆ. ದಾಸೋಹವೆಂದರೆ ಭೃತ್ಯಾಚಾರ ಅರ್ಥಾತ್ ಸಮಾಜ ಸೇವೆ. ವಚನಗಳನ್ನು ತೆಗೆದುಕೊಂಡು ವ್ಯಾಖ್ಯಾನವನ್ನು ಮಾಡುತ್ತ ಜನರನ್ನು ರಂಜಿಸುವ ಅಯ್ಯಗಳಿರಾ ನಿಮಗೆ ವಚನಾನುಭವ ಮುಖ್ಯವೋ ಅಥವಾ ದಾಸೋಹ ಮುಖ್ಯವೋ? ನಾವು ಆರೂಢರು ಎಂದು ಹೇಳಿಕೊಳ್ಳುತ್ತ ಶರೀರ ಗುಣಗಳನ್ನು ಅಳಿದುಕೊಳ್ಳದ ಅಯ್ಯಗಳಿರಾ ನಿಮಗೆ ಆರೂಢತ್ವವೇ ಮುಖ್ಯವೋ ದಾಸೋಹ ಮುಖ್ಯವೋ? ನಾನು ಬ್ರಹ್ಮನಿದ್ದೇನೆ (ಅಹಂ ಬ್ರಹ್ಮಾಸ್ಮಿ) ಎಂದು ಭ್ರಮೆಯಲ್ಲಿ ಇರುವ ಅಯ್ಯಗಳಿರಾ ಬ್ರಹ್ಮವಿದ್ಯೆಯೇ ಮುಖ್ಯವೋ ದಾಸೋಹ ಮುಖ್ಯವೋ? ಮಾತುಗಳ ಮಂಟಪ ಕಟ್ಟಿಕೊಂಡು, ಹುಲಿಯ ಬೆನ್ನ ಹತ್ತಿದಂತೆ ಏಕೆ ವರ್ತಿಸುವಿರಿ? ಜಂಗಮ ದಾಸೋಹ ಮಾಡುವ ಶರಣರು ಎಲ್ಲರಿಗೂ ಬಲ್ಲವರು. ಲಿಂಗದೇವನು ಆ ವಾಗ್ಬ್ರಹ್ಮಿಗಳ ಹಲ್ಲು ಕಳೆಯುವನು.

-- ಮುಂದುವರಿಯುವುದು.

ಬಸವಾದಿ ಶರಣರ ಸಂಕಲ್ಪ

ನಾರಿಯೊಬ್ಬಳು ಬಂದು, ಭಾರಿ ಅಬ್ಬರ ಹೊತ್ತು
ಆರೂಢ ಭಿಕ್ಷೆಯ ಬೇಡ್ಯಾಳೋ ಸುವ್ವಿ , ನಮ್ಮ ವೀರ ಬಸವಣ್ಣ ಬರುವಾಗ ಸುವ್ವಿ.

ಇದು ಪರಮಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯುವರ ಕುರಿತು ಶರಣರು ನುಡಿದ ಭವಿಷ್ಯವಾಣಿ. ಮುಂದೆ ಪೂಜ್ಯ ಮಾತೆಯವರು ಅವತರಿಸಿ ಗುರು ಬಸವಣ್ಣನವರ ತತ್ತ್ವಗಳನ್ನು ಜಗತ್ತಿನಾದ್ಯಂತ ಪಸರಿಸುವರೆಂಬುದನ್ನು ಆದಿ ಶರಣರು ಅಂದೇ ಮನಗಂಡಿದ್ದರು. ಅಂತೆಯೇ ಪೂಜ್ಯ ಮಾತಾಜಿಯವರು ಕೈಗೊಳ್ಳುವ ಪ್ರತಿಯೊಂದು ಯೋಜನೆಗಳು ಮತ್ತು ಇಡುವ ಒಂದೊಂದು ಹೆಜ್ಜೆಯೂ ಬಸವಾದಿ ಶರಣರ ಸಂಕಲ್ಪದಿಂದ ಕೂಡಿರುತ್ತದೆ. ಬಸವಾತ್ಮಜೆಯಾಗಿ ಬಸವ ಸಂಕಲ್ಪವನ್ನು ಪೂರ್ಣಗೊಳಿಸುತ್ತಿದ್ದಾರೆ ಪೂಜ್ಯ ಮಾತಾಜಿ.

ಮೊಟ್ಟ ಮೊದಲಿಗೆ ಪ್ರವಚನ ಪಿತಾಮಹರಾದ, ಬಸವಯುಗದ ನಿರ್ಮಾಪಕರೂ ಆಗಿರುವ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರ ಆಣತಿಯಂತೆ ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುವಾಗಿ ಧಾರವಾಡದ 'ಅಕ್ಕಮಹಾದೇವಿ ಅನುಭಾವ ಪೀಠ'ವನ್ನು ಅಲಂಕರಿಸಿದರಲ್ಲದೆ, ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ 'ಬಸವ ಧರ್ಮದ ಮಹಾಜಗದ್ಗುರು ಪೀಠ'ವನ್ನು ಸ್ಥಾಪಿಸಿ ಪೂಜ್ಯ ಗುರು ಲಿಂಗಾನಂದರನ್ನು ಮಹಾಜಗದ್ಗುರುಗಳನ್ನಾಗಿ ಮಾಡಿದರು. 2002ರಲ್ಲಿ ಬಸವ ಕಲ್ಯಾಣದಲ್ಲಿ 'ಅಲ್ಲಮಪ್ರಭು ಶೂನ್ಯಪೀಠ', 2006ರಲ್ಲಿ ಮಹಾರಾಷ್ಟ್ರದ ಅಲ್ಲಮಗಿರಿಯಲ್ಲಿ 'ಅಲ್ಲಮಪ್ರಭು ಯೋಗಪೀಠ' ಹಾಗೂ 2010ರಲ್ಲಿ ಬೆಂಗಳೂರು ಹತ್ತಿರದ ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ 'ಶ್ರೀ ಚನ್ನಬಸವೇಶ್ವರ ಜ್ಞಾನಪೀಠ'ವನ್ನು ಸ್ಥಾಪಿಸಿದರು. ಆ ಪೀಠಕ್ಕೆ ಅದೇ ಹೆಸರಿನ ಪೂಜ್ಯ ಚನ್ನಬಸವಾನಂದ ಸ್ವಾಮೀಜಿಯವರನ್ನು ಪೀಠಾಧ್ಯಕ್ಷರನ್ನಾಗಿ ಮಾಡಿರುವುದೂ ಶರಣರ ಸಂಕಲ್ಪವೇ ಸರಿ.

ದೀಪಾವಳಿ ಪಾಡ್ಯ 1172 ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಜನ್ಮದಿನ. ಇಂದು ದೀಪಾವಳಿ ಪಾಡ್ಯ, ನವೆಂಬರ 14ಕ್ಕೆ 841ನೇ ಜಯಂತಿಯನ್ನು ಎಲ್ಲೆಡೆ ಆಚರಿಸಲಾಗುತ್ತಿದೆ. ವಿಶೇಷವೆಂದರೆ ಶ್ರೀ ಚನ್ನಬಸವೇಶ್ವರ ಜ್ಞಾನಪೀಠದ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿಯವರ ಜನ್ಮ ದಿನಾಂಕ ನವೆಂಬರ 14, 1972. ಅಂದರೆ ಎಂಟು ನೂರು ವರ್ಷಕ್ಕೆ ಸರಿಯಾಗಿ ಸ್ವಾಮೀಜಿಯವರ ಜನನ ಆಗಿದ್ದು. ಈ ವರ್ಷದ ನ.14ರಂದು ಚನ್ನವಾರ (ಬುಧವಾರ) ಅರ್ಥಾತ್ ಚನ್ನಬಸವ ವಾರ ಬಂದಿರುವುಧು ಸಹ ದೈವಿ ಸಂಕೇತವೇ ಆಗಿದೆ.

ಹುಟ್ಟುತ್ತಲೇ ಪರಿಮಳ ಮರುಗದ ಗಿಡದಂತೆ. ಇಂದೇ ಹುಟ್ಟಿದ ಕೂಸಿಗೆ ಇಂದೇ ಜವ್ವನವಾಯಿತು ಎಂಬಂತೆ ತೀವ್ರಗತಿಯ ಸಾಧನೆ ಮಾಡಿದವರು ಕಿರಿಯ ವಯಸ್ಸಿನ ಚನ್ನಬಸವಣ್ಣನವರು. ಅದೇ ರೀತಿ ಅತ್ಯಂತ ಕಿರಿಯ ವಯಸ್ಸಿನಲ್ಲಿ ಹಿರಿದಾದ ಜ್ಞಾನವನ್ನು ಸಂಪಾದಿಸಿಕೊಂಡು ಜ್ಞಾನಪೀಠವನ್ನೇರಿದವರು ಪೂಜ್ಯ ಚನ್ನಬಸವಾನಂದ ಸ್ವಾಮೀಜಿಯವರು.

ಇಂದು ನವೆಂಬರ್ 14. ದೆಹಲಿಯ ಬಸವ ಮಂಟಪದಲ್ಲಿ ಪೂಜ್ಯ ಸ್ವಾಮೀಜಿಯವರ ಸಮ್ಮುಖದಲ್ಲಿ ಶ್ರೀ ಚನ್ನಬಸವೇಶ್ವರರ 841ನೆಯ ಜಯಂತಿ ಉತ್ಸವ ಹಾಗೂ ಸ್ವಾಮೀಜಿಯವರ 41ನೆಯ ವರ್ಧಂತಿಯನ್ನು ಆಚರಿಸಲಾಯಿತು. ಶ್ರಿ ಬಸವೇಶ್ವರ ಪೂಜಾವ್ರತ, ಚನ್ನಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಮತ್ತು ಸ್ವಾಮೀಜಿಯವರಿಗೆ ಪುಷ್ಪವೃಷ್ಟಿ ಹಾಗೂ 41 ದೀಪಗಳಿಂದ ಆರತಿ ಬೆಳಗಲಾಯಿತು. ಪೂಜ್ಯ ಸರ್ವಮಂಗಳಾ ಮಾತಾಜಿಯವರ ನೇತೃತ್ವದಲ್ಲಿ ದೆಹಲಿಯ ಹಲವಾರು ಗಣ್ಯ ಅತಿಥಿಗಳು, ಬಸವ ಮಂಟಪದ ಐಎಎಸ್ ವಿದ್ಯಾರ್ಥಿಗಳು, ಶರಣೆ ಮುಕ್ತಾಯಕ್ಕ ಉಪಸ್ಥಿತರಿದ್ದರು.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ಕೂಡಲ ಸಂಗಮದಲ್ಲಿ
ಜಗದ್ಗುರು ಲಿಂಗಾನಂದ ಸ್ವಾಮಿಗಳವರ
63 ಅಡಿ ಎತ್ತರದ ಭವ್ಯ ಸ್ಮಾರಕ

ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ.
ಸತ್-ಚಿತ್-ಆನಂದನ ಶುಭರಕ್ಷೆಯು ತಮಗಿದೆ.

ಮನುಗೂಳಿಯಲ್ಲಿ ಹುಟ್ಟಿದ ಮಂಗಳ ಬೆಳಕು ಬಸವ ಯುಗದ ಪುನರುದ್ಧಾರಕರಾಗುವರೆಂದು ಯಾರು ಊಹಿಸಿದ್ದರು? ಆದರೆ ಅಂಥದೊಂದು ಪವಾಡ ನಡೆದೇ ಹೋಯಿತು. ವಿಜಾಪುರ ಜಿಲ್ಲೆ ಐದು ನದಿಗಳಿಂದ ಕೂಡಿದ್ದರೂ ಬರದನಾಡು ಎಂಬ ವಿಶೇಷಣ ಹೊತ್ತಿದೆ. ಆದರೆ ಸಾಹಿತ್ಯಿಕವಾಗಿ ಸಾಂಸ್ಕೃತಿಕವಾಗಿ ಸಂಪದ್ಭರಿತ ನಾಡಿದು. 12ನೆಯ ಶತಮಾನದಲ್ಲಿ ಕ್ರಾಂತಿಪುರುಷ ಬಸವಣ್ಣನವರಿಗೆ ದಿ. 30-4-1134 ರಂದು ಜನ್ಮವಿತ್ತಿತು. ಅವರು ಲಿಂಗಾಯತ ಧರ್ಮ ಪಿತಾಮಹರಾಗಿ ವಚನ ವಾಙ್ಮಯಕ್ಕೆ ಕಾರಣೀಭೂತರಾದರು. ಕಲ್ಯಾಣ ಕ್ರಾಂತಿಯ ನಂತರ ವಚನ ಸಾಹಿತ್ಯವು ಸಹ್ಯಾದ್ರಿಯ ಅರಣ್ಯವನ್ನು ಸೇರಿತು. ಶರಣರು ಚದುರಿ ಚಲ್ಲಾಪಿಲ್ಲಿಯಾದರು. ಲಿಂಗಾಯತ ಸಮಾಜವು ಧರ್ಮಗುರು ಬಸವಣ್ಣ ಎಂಬ ತಂದೆಯನ್ನು, ಧರ್ಮ ಸಂಹಿತೆ ವಚನ ಸಾಹಿತ್ಯ ಎಂಬ ತಾಯಿಯನ್ನು ಕಳೆದುಕೊಂಡು ಅನಾಥವಾಯಿತು. ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಅತ್ತಿತ್ತ ಅಲೆದಾಡಿತು, ಅಲೆದಾಡುತ್ತಲೂ ಇದೆ!

ಜಗುಲಿಯ ಕಟ್ಟೆಗಳ ಮೇಲೆ ನೀರು ಚಿಮುಕಿಸಿಕೊಂಡು ಕೊಳೆಯುತ್ತ, ಕಗ್ಗತ್ತಲೆಯ ವಾಸವನ್ನು ಅನುಭವಿಸುತ್ತಿದ್ದ ವಚನ ವಾಙ್ಮಯವನ್ನು ಬೆಳಕಿಗೆ ತಂದ ವಚನ ಪಿತಾಮಹ ಶರಣ ಫ.ಗು. ಹಳಕಟ್ಟಿಯವರು ಹುಟ್ಟಿದ್ದು ದಿ. 2-7-1880ರಂದು ಇದೇ ಬಿಜಾಪುರ ಜಿಲ್ಲೆಯಲ್ಲಿಯೇ! ಬಡತನದ ಸಂಕಷ್ಟವನ್ನು ಎದುರಿಸುತ್ತಲೇ ಒಂದು ವಿಶ್ವವಿದ್ಯಾಲಯ ಸರ್ಕಾರದ ನೆರವಿನಿಂದ ಪ್ರಕಟಿಸಬಹುದಾದಷ್ಟು ಸಾಹಿತ್ಯವನ್ನು ಶರಣ ಫ.ಗು. ಹಳಕಟ್ಟಿ ವೈಯಕ್ತಿಕವಾಗಿ ಪ್ರಕಟಿಸಿದರು. ನಂತರ ಕರ್ನಾಟಕ ವಿಶ್ವ ವಿದ್ಯಾಲಯವು ಶರಣ ರ್‍ಯಾಂಗ್ಲರ್ ಡಿ.ಸಿ. ಪಾವಟೆಯವರ ಪ್ರೇರಣೆಯಿಂದ ವಿಪುಲ ಸಾಹಿತ್ಯವನ್ನು ಪ್ರಕಟಿಸಿತು. ಆದರೆ ವಚನ ವಾಙ್ಮಯವು ಜನ ಸಾಮಾನ್ಯರನ್ನು ತಲುಪಿರಲಿಲ್ಲ. ವಿಶ್ವವಿದ್ಯಾಲಯದ ಮಟ್ಟದಲ್ಲೇ ಉಳಿದಿತ್ತು. ಜನಸಾಮಾನ್ಯರ ಮಟ್ಟಕ್ಕೆ ಜನಗಳ ಮನೆ-ಮನಗಳ ಬಾಗಿಲಿಗೆ ಒಯ್ದು ಜ್ಞಾನ ಮಾರುತ ಪೂಜ್ಯ ಲಿಂಗಾನಂದ ಸ್ವಾಮಿಗಳು ಹುಟ್ಟಿದ್ದೂ ಬಿಜಾಪುರ ಜಿಲ್ಲೆಯಲ್ಲಿಯೇ. ಬಾಗೇವಾಡಿ ತಾಲ್ಲೂಕಿನ ಮನುಗೂಳಿಯ ಶರಣ. ಮಲ್ಲಪ್ಪ ಕಪ್ಪರದ ಮತ್ತು ಶರಣೆ ಕಲ್ಲಮ್ಮನವರ ಮೊದಲನೆಯ ಮಗನಾಗಿ ದಿ. 15-9-1931ರಂದು ಜನಿಸಿದ ಸಂಗಮೇಶ ಬಡತನದ ಸಂಕಷ್ಟದಲ್ಲಿಯೇ ಬಾಲ್ಯವನ್ನು ಕಳೆದು ಬಿಜಾಪುರ, ಬೆಳಗಾಂವನಲ್ಲಿ ವಾರಾನ್ನವನ್ನುಂಡು, ಪೂಜ್ಯ ನಾಗನೂರು ಶ್ರೀಗಳ ಬೋರ್ಡಿಂಗ್‌ನಲ್ಲಿ ಇದ್ದು ವಿದ್ಯಾಭ್ಯಾಸವನ್ನು ಪೂರೈಸಿದರು. ಬಿ.ಎ.. ಆನರ್ಸ್ ಪೂರೈಸಿ ನೌಕರಿ ಹುಡುಕಿ ತಾಯಿ-ತಂದೆ, ತಂಗಿ-ತಮ್ಮಂದಿರ ಸಂಕಷ್ಟ ಕಳೆಯಬೇಕು ಎಂದುಕೊಳ್ಳುವಾಗಲೇ ಗುರು ಬಸವಣ್ಣನವರಿಂದ ಧರ್ಮಪ್ರಚಾರಕ್ಕಾಗಿ ತ್ಯಾಗಿಯಾಗಬೇಕೆಂಬ

ನಿರೂಪ ಬಂದಿತು. ಗುರು ಬಸವಣ್ಣನವರು ಸಂಗಮೇಶರನ್ನು ತನ್ನ ಕರುಣೆಯ ಕಂದರನ್ನಾಗಿ ಆರಿಸಿಕೊಂಡರು. ಸಂಗಮೇಶರು ಅದಕ್ಕೆ ತಲೆಬಾಗಿದರು. ಎಂ.ಎ. ತತ್ತ್ವಜ್ಞಾನ ಓದಲು ಧಾರವಾಡ ವಿಶ್ವವಿದ್ಯಾಲಯದಲ್ಲಿ ಹೆಸರು ಹಚ್ಚಿದರಾದರೂ ಆರ್ಥಿಕ ಅನಾನುಕೂಲತೆಯಿಂದ ಓದು ಮುಂದುವರಿಸಲು ಆಗಲಿಲ್ಲ. ಒಂದು ದಿನ. ಅಂದು 19-11-1956 ವಿದ್ಯಾಭ್ಯಾಸಕ್ಕೆ ತಿಲಾಂಜಲಿ ಕೊಟ್ಟು ಧಾರವಾಡದ ಹೊರಗಿರುವ ಹದ್ದಿನ ಗುಡ್ಡದ ಶಿಖರದ ಮೇಲಿರುವ ಬಸವಣ್ಣನ ಗುಡಿಯಲ್ಲಿ ಸ್ವಯಂ ಪ್ರೇರಣೆಯಿಂದ, ವಿಶ್ವಗುರು ಬಸವಣ್ಣನವರನ್ನು ತಮ್ಮ ಜ್ಞಾನಗುರುವನ್ನಾಗಿ ಭಾವಿಸಿ ಕಾವಿ ವಸ್ತ್ರ ಧರಿಸಿ ಜ್ಞಾನ ಸನ್ಯಾಸವನ್ನು ಸ್ವೀಕರಿಸಿದರು. ಅದು ಬಹಳ ಮಹತ್ವಪೂರ್ಣವಾದ ದಿನ. ಕ್ರಾಂತಿಪುರುಷರೊಬ್ಬರನ್ನು ಗುರು ಬಸವಣ್ಣನವರು ಜಗತ್ತಿಗೆ ನೀಡಿದ ದಿನ.

ಅಂದು ಚರಜಂಗಮರಾಗಿ, ಸಂಗಮೇಶರು ಸ್ವಾಮಿ ಲಿಂಗಾನಂದರಾಗಿ ಸಂಚರಿಸ ತೊಡಗಿದವರು ಜೀವನದ ಕಡೆಯ ಕ್ಷಣದವರೆಗೂ ಪ್ರವಚನ ಕಾಯಕದಲ್ಲಿ ನಿರತರಾಗಿ ಪ್ರವಚನ ಪಿತಾಮಹರೆನ್ನಿಸಿಕೊಂಡರು. ಅವರ ಪ್ರವಚನಗಳಲ್ಲಿ ಅದ್ಭುತವಾದ ಪರಿವರ್ತನೀಯ ಶಕ್ತಿ ಇದ್ದಿತು. ಒಂದು ಕಡೆ ಭಾವ ಶ್ರೀಮಂತಿಕೆ ಇನ್ನೊಂದು ಕಡೆ ಧೀಮಂತ ವೈಚಾರಿಕತೆ. ಹೀಗಾಗಿ ಭಾವಜೀವಿ-ಬುದ್ಧಿ ಜೀವಿಗಳಿಬ್ಬರನ್ನು, ಪಂಡಿತ ಪಾಮರರೆಲ್ಲರನ್ನು ಆಕರ್ಷಿಸುತ್ತಿದ್ದರು. ಹರಿಯುವ ನದಿಯಂತೆ ಅವರು ಕರ್ನಾಟಕದ ಎಲ್ಲ ಜಿಲ್ಲೆಗಳನ್ನು ನೆರೆಯ ಮಹಾರಾಷ್ಟ್ರ , ಆಂಧ್ರ, ತಮಿಳುನಾಡುಗಳನ್ನು ಸಂದರ್ಶಿಸಿದರು. ಪ್ರವಚನದ ಮೂಲಕ ಬಸವ ಸಾಮ್ರಾಜ್ಯವನ್ನೇ ನಿರ್ಮಿಸಿದರು. ಬಸವ ತತ್ತ್ವವನ್ನು ಜನಮನದಲ್ಲಿ ಬಿತ್ತಿ ಬೆಳೆದರು.

ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠವನ್ನು ದಿ. 21-4-1970 ರಂದು ಸ್ಥಾಪಿಸಿ, ಅದಕ್ಕೆ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಮಹಿಳಾ ಜಗದ್ಗುರುವಾಗಿ ಪೀಠಾರೋಹಣ ಮಾಡಿಸಿದರು. ಬೆಂಗಳೂರಿನಲ್ಲಿ ವಿಶ್ವಧರ್ಮ ಪ್ರವಚನಗಳನ್ನು ವಿವಿಧ ಬಡಾವಣೆಗಳಲ್ಲಿ ಮಾಡುತ್ತ ವಿಶ್ವಕಲ್ಯಾಣ ಮಿಷನ್ ಎಂಬ ಟ್ರಸ್ಟನ್ನು ಸ್ಥಾಪಿಸಿದರು. 1975ರಲ್ಲಿ ಮೊಟ್ಟ ಮೊದಲ ಪ್ರಾರ್ಥನಾ ಮಂದಿರ ಬಸವ ಮಂಟಪವು ಉದ್ಘಾಟನೆಗೊಂಡಿತು. 1987ರಲ್ಲಿ ಬಸವ ಧರ್ಮಪೀಠ ಟ್ರಸ್ಟ್ ಸ್ಥಾಪನೆಗೊಂಡು ಕೂಡಲ ಸಂಗಮದಲ್ಲಿ ಕಾರ್ಯಾರಂಭ ಮಾಡಿತು. ಕೂಡಲ ಸಂಗಮವನ್ನು ಧರ್ಮಕ್ಷೇತ್ರ ಎಂದು ಗುರುತಿಸಿ, ಘೋಷಿಸಿ 1988ರಲ್ಲಿ ಮೊಟ್ಟ ಮೊದಲನೆಯ ಶರಣ ಮೇಳ ಆಯೋಜಿಸಲ್ಪಟ್ಟಿತು. 1992ರಲ್ಲಿ ಲಿಂಗಾಯತ ಧರ್ಮದ ಪರಮೋಚ್ಚ ಪೀಠವಾದ ಬಸವ ಧರ್ಮದ ಮಹಾಜಗದ್ಗುರು ಪೀಠವು ಸ್ಥಾಪಿಸಲ್ಪಟ್ಟು ದಿ. 13-1-1992 ರಂದು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಪ್ರಥಮ ಮಹಾ ಜಗದ್ಗುರುವಾಗಿ ಪೀಠವನ್ನು ಅಲಂಕರಿಸಿದರು. ಕ್ರಾಂತಿಕಾರಿ ಧರ್ಮ ಪ್ರಸಾರಕರಾಗಿ ಸಮಾಜದಲ್ಲಿ ಪರಿವರ್ತನೆಯ ಕಾರ್ಯ ಕೈಗೊಂಡ ಪೂಜ್ಯ ಸ್ವಾಮೀಜಿ ಹಿರಿಯೂರಿನಲ್ಲಿ ಪ್ರವಚನ ಮಾಡುತ್ತಲಿರುವಾಗ ದಿ. 30-6-1995 ರಂದು ಹೃದಯ ಸ್ತಂಭನದಿಂದ ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ಚರ ಜಂಗಮವಾಗಿ ಜ್ಞಾನ ಸನ್ಯಾಸವನ್ನು ಕೈಗೊಂಡ ದಿನದಿಂದ ಲಿಂಗೈಕ್ಯರಾಗುವವರೆಗೂ ಅವಿಶ್ರಾಂತವಾಗಿ ದುಡಿದ ಪೂಜ್ಯ ಅಪ್ಪಾಜಿ ಪ್ರವಚನ ತಪಸ್ವಿ, "ಧ್ಯಾನವು ವ್ಯಷ್ಟಿ ತಪಸ್ಸು, ಆತ್ಮೋದ್ಧಾರಕ್ಕೆ ಸಾಧನ, ಪ್ರವಚನವು ಸಮಷ್ಟಿ ತಪಸ್ಸು. ಪ್ರವಚನವು ಮಾಡುವವರ ಆತ್ಮೋದ್ಧಾರಕ್ಕೆ ಕಾರಣವಾಗುವುದಲ್ಲದೆ ಕೇಳುಗರ ಉದ್ಧಾರಕ್ಕೂ ಕಾರಣವಾಗುವುದು. ಮಾತ್ರವಲ್ಲ ಅವರ ಜೀವನವನ್ನು ಪರಿವರ್ತಿಸುವುದು". ಎಂದು ಹೇಳಿ ಪ್ರವಚನ ಯೋಗದಲ್ಲೇ ಅಪೂರ್ವ ಆನಂದ, ಸಂತೃಪ್ತಿ ಕಂಡುಕೊಂಡ ಮಹಾಪುರುಷರು ಜಗದ್ಗುರು ಲಿಂಗಾನಂದರು.

ಪೂಜ್ಯ ಜಗದ್ಗುರು ಲಿಂಗಾನಂದ ಸ್ವಾಮಿಗಳಿಗೆ ಸ್ಮಾರಕ

ಪೂಜ್ಯ ಅಪ್ಪಾಜಿ ಎಂದು ಭಕ್ತರಿಂದ ಕರೆಸಿಕೊಂಡ ಪೂಜ್ಯ ಲಿಂಗಾನಂದ ಸ್ವಾಮಿಗಳ ದಿವ್ಯ ಸಮಾಧಿ ರಚನೆಯಾಗಿರುವುದು ಕೂಡಲ ಸಂಗಮದ ಬಸವ ಧರ್ಮಪೀಠದ ಮಹಾಮನೆ ಮಹಾಮಠದ ಶರಣ ಲೋಕದ ಆವರಣದಲ್ಲಿ. ಇಲ್ಲಿ ಪೂಜ್ಯರಿಗೆ ಒಂದು ಸ್ಮಾರಕವನ್ನು ನಿರ್ಮಿಸಬೇಕು ಎಂಬ ಆಲೋಚನೆ ಹೊಂದಿ ದಿ. 12-12-2012 ರಂದು ಬಸವ ಕಲ್ಯಾಣದಲ್ಲಿ 108 ಅಡಿ ಬಸವ ಪುತ್ಥಳಿ ನಿರ್ಮಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರುವ ಶಿಲ್ಪಿ ಶ್ರೀ ಶ್ರೀಧರ ಮೂರ್ತಿಯವರನ್ನು ಕರೆಸಿ ಚರ್ಚಿಸಲಾಯಿತು. ಮತ್ತು ಆ ವಿಶೇಷ ದಿನದಂದು ಸ್ಮಾರಕ ನಿರ್ಮಾಣಕ್ಕೆ ಸಂಕಲ್ಪಿಸಲಾಯಿತು.

ಸ್ಮಾರಕದ ರೂಪುರೇಷೆ

ಅಡಿಪಾಯದಲ್ಲಿ ಒಂದು ಹಾಲ್. ಪೂಜ್ಯರ ವಿವಿಧ ಭಾವಚಿತ್ರ ಸಂಗ್ರಹವನ್ನು ಅಲ್ಲಿ ಪ್ರದರ್ಶಿಸುವುದು. ಪ್ರವಚನದ ವೀಡಿಯೋ ಪ್ರದರ್ಶನಕ್ಕೂ ಏರ್ಪಾಡು ಮಾಡುವುದು. ಮೇಲೆ ಅಷ್ಟಕೋನಾಕೃತಿಯ ಒಂದು ನೆಲೆಗಟ್ಟು. ಅದರ ಮೇಲೆ 63 ಅಡಿ ಎತ್ತರದ ಮೂರ್ತಿ. 63 ಅಡಿ ಎತ್ತರದ ಮೂರ್ತಿಯೆ ಏಕೆ? ಪೂಜ್ಯ ಗುರು ಬಸವಣ್ಣನವರು ಬದುಕಿದ್ದು 62 ವರ್ಷ 3 ತಿಂಗಳು 2 ದಿವಸ. ಅಂದರೆ 63 ವರ್ಷ. ಪೂಜ್ಯ ಅಪ್ಪಾಜಿ ಜೀವಿಸಿದ್ದು ಸಹ 63 ವರ್ಷ 9 ತಿಂಗಳು (15-9-1931 ರಿಂದ 30-6-1995). 63 ಪ್ರೀತಿ-ಸಾಮರಸ್ಯಗಳ ಸಂಕೇತ. ಅದಕ್ಕಾಗಿ 63ಅಡಿ ಎತ್ತರಕ್ಕೆ ಸಂಕಲ್ಪಿಸಲಾಗಿದೆ.

ದೇಣಿಗೆಗಾಗಿ ಮನವಿ

ಬಸವ ತತ್ತ್ವದ ಪುನರುದ್ಧಾರಕರಾದ ಪೂಜ್ಯ ಗುರುಗಳಿಗೆ ಒಂದು ಸ್ಮಾರಕ ಮಾಡುವುದು ಅವರ ಶಿಷ್ಯರು ಮತ್ತು ಭಕ್ತರೆಲ್ಲರ ಕರ್ತವ್ಯ ಎಂದು ನಾವು ಭಾವಿಸಿದ್ದೇವೆ. ಪೂಜ್ಯರಿಂದ ಪ್ರೇರಣೆ ಪಡೆದವರು, ದೀಕ್ಷೆ ಪಡೆದವರು, ಪ್ರವಚನಗಳನ್ನು ಕೇಳಿದವರು ಎಲ್ಲರೂ ಗುರು ಋಣದಲ್ಲಿ ಇರುವವರೆ. ಆ ಗುರುಋಣವನ್ನು ಕಾಣಿಕೆಯ ಮೂಲಕ ತೀರಿಸಲು ಇದು ಒಳ್ಳೆಯ ಅವಕಾಶವನ್ನು ಒದಗಿಸುವುದು. ಒಂದು ದಿವಸ ಒಬ್ಬ ಕಾಯಕ ಜೀವಿ ಶರಣ ಬಂದು ಹೇಳಿದ "ನಾವು ಸಾಮಾನ್ಯ ಕಾಯಕದವರು. ಪ್ರತಿ ತಿಂಗಳು ಕೂಡಿಟ್ಟು ಹನ್ನೊಂದು ಸಾವಿರ ರೂ.ಗಳನ್ನು ಬೃಹತ್ ಬಸವ ಪುತ್ಥಳಿಗಾಗಿ ಕೊಟ್ಟೆವು. ಕಿಂಚಿತ್ ಗುರು ಋಣವನ್ನು ತೀರಿಸಿದ ಧನ್ಯತೆ ಮೂಡಿತು. ಧರ್ಮಕ್ಕಾಗಿ ಸ್ವಲ್ಪ ತೆಗೆದಿಟ್ಟು ಕೊಡುವ ಅಭ್ಯಾಸ ರೂಢಿಯಾಯಿತು. ಆದ್ದರಿಂದ ನೀವು ಇನ್ನೊಂದು ಯೋಜನೆ ರೂಪಿಸಬೇಕು. ಅಂದರೆ ನಮಗೆ ಕೊಡಲು ಅನುಕೂಲವಾಗುವುದು." ಎಂದಾಗ ನನ್ನ ಹೃದಯ ತುಂಬಿ ಬಂದಿತು. ಸಾಮಾನ್ಯ ಕಾಯಕ ಜೀವಿಗಳು ತಮ್ಮ ಬೆವರಿನ ಪರಿಶ್ರಮದಿಂದ ಗಳಿಸಿದ ಪವಿತ್ರ ಹಣದಿಂದ ಬಸವ ಪುತ್ಥಳಿ ನಿರ್ಮಾಣವಾಗಿದೆ. ಎನ್ನಲು ನಮಗೆ ಹೆಮ್ಮೆ ಎನಿಸುತ್ತದೆ.

ಪೂಜ್ಯ ಅಪ್ಪಾಜಿಯವರ ಸ್ಮಾರಕ ಮತ್ತು ಅದರ ಸುತ್ತಲೂ ಹೂದೋಟ ಮುಂತಾಗಿ ಮಾಡಲು ಅಂದಾಜು 2 ಕೋಟಿ ರೂ.ಗಳ ವೆಚ್ಚ ಬರಬಹುದೆಂದು ತಜ್ಞರ ಅಭಿಪ್ರಾಯ. ಈ ಯೋಜನೆಯನ್ನು ಸಾಕಾರಗೊಳಿಸಲು 1. ಬಸವ ಧರ್ಮ ಪೀಠ ಟ್ರಸ್ಟ್ ಮತ್ತು 2. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಎರಡೂ ಸೇರಿ ಕಾರ್ಯಮಾಡಲು, ದೇಣಿಗೆ ಸಂಗ್ರಹಿಸಲು ನಿರ್ಧರಿಸಿವೆ.

ದೇಣಿಗೆಯ ಬಗೆಗಳು

1. ಅವರವರ ಶಕ್ತ್ಯಾನುಸಾರ ಭಕ್ತಿಯಿಂದ ಎಷ್ಟು ಕಾಣಿಕೆ ಕೊಟ್ಟರೂ ಸ್ವೀಕರಿಸಲಾಗುವುದು.

2. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು (ಡೋನರ್ ಬೋರ್ಡ್) ದಾನಿಗಳ ಫಲಕದಲ್ಲಿ ಬರೆಸಲಾಗುವುದು.
3. 25,000 (ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ದಾನಿಗಳ ಶಿಲಾಫಲಕದಲ್ಲಿ ಕೆತ್ತಿಸಲಾಗುವುದು.
4. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ (ಹಿಂದೆ, ಎಡ ಮತ್ತು ಬಲಪಕ್ಕ) ಬರುವ ಸ್ಥಳಗಳಲ್ಲಿ ಒಂದು ಕಡೆ ಹಾಕಿಸಲಾಗುವುದು.
5. 1,00,000 (ಒಂದು ಲಕ್ಷ) ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ ಬರುವ ಸ್ಥಳಗಳಲ್ಲಿ ಒಂದು ಕಡೆ ಹಾಕಿಸಲಾಗುವುದಲ್ಲದೆ ಮ್ಯೂಸಿಯಮ್‌ನಲ್ಲಿ ಒಳಗೆ ದಾನಿಗಳ ಒಂದು ಫೋಟೋ ಸಹ ಪ್ರದರ್ಶಿಸಲಾಗುವುದು.

ವಿಶೇಷ ಸೂಚನೆ

ಈ ಯೋಜನಾ ಪತ್ರ ನೋಡಿದ ನೀವೂ ಹೆಚ್ಚಿನ ಪ್ರಮಾಣದಲ್ಲಿ ಕಾಣಿಕೆ ಕೊಡಲು, ನಿಮ್ಮ ಬಂಧು-ಮಿತ್ರರಿಂದ ಕೊಡಿಸಲು ಆಸಕ್ತಿವಹಿಸಬೇಕಾಗಿ ವಿನಂತಿಸುತ್ತೇವೆ. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ 80ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿಯ ಸೌಲಭ್ಯ ಪಡೆದಿದ್ದು, ದಾನಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು. ಈ ಸೌಲಭ್ಯವು ನವೀಕರಣಗೊಂಡು ಚಾಲ್ತಿಯಲ್ಲಿದೆ ಎಂಬುದನ್ನು ದಾನಿಗಳ ಗಮನಕ್ಕೆ ತರಲು ಬಯಸುತ್ತೇವೆ.

ಕೇಂದ್ರ ಸಂಸ್ಥೆ :

ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೇ ಮುಖ್ಯರಸ್ತೆ
2ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು – 560 010
ದೂರವಾಣಿ : 080-23131476

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ
ಮಹಾಮನೆ ಮಹಾಮಠ, ಶರಣ ಲೋಕ
ಕೂಡಲಸಂಗಮ – 587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂರವಾಣಿ : 94481 37508, 94480 46554

ಶ್ರೀ ಗುರುವಿನ ಶಿವ ಚರಣಕೆ
ನಮೋ ನಮೋ ಎಂಬೆನು
ಗುರುದೇವನ ದಿವ್ಯತ್ವಕೆ
ಶರಣಾಗತಳಾದೆನು



॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ ಕುಂಬಳಗೋಡಿನ, ಬಸವ ಗಂಗೋತ್ರಿಯಲ್ಲಿ 111 ಅಡಿ ಎತ್ತರದ ಬಸವ ಪುತ್ಥಳಿ

ವಿಶ್ವಗುರು ಬಸವಣ್ಣನವರು ಜಗತ್ತಿನ ಪ್ರಥಮ ಸಮಾಜವಾದಿ(Socialist), ಶ್ರೇಷ್ಠ ಶಿಕ್ಷಣ ತಜ್ಞ(Educationist)ರು, ಸಮಾಜ ಸುಧಾರಕ(Social Reformer)ರು, ಮಾನವತಾವಾದಿ(Humanist) ಗಳು, ಲಿಂಗಾಯತ ಧರ್ಮದ ಸಂಸ್ಥಾಪಕರು ಅವರ ಬಗ್ಗೆ ಕರ್ನಾಟಕದ ಜನತೆ ಮಾತ್ರವಲ್ಲ ಸಮಸ್ತ ಭಾರತೀಯರು ಮತ್ತು ವಿದೇಶೀಯರು ತಿಳಿದುಕೊಳ್ಳಬೇಕಾದುದು ಅಗತ್ಯವಿದೆ. ಹಿಂದೆ ಬೌದ್ಧ ಧರ್ಮೀಯರ ಧರ್ಮ ಪ್ರಚಾರಕರು ಗೌತಮ ಬುದ್ಧನ ಬೃಹತ್ ಪ್ರತಿಮೆಗಳ ಮೂಲಕ ಬುದ್ಧನ ತನ್ಮೂಲಕ ಬೌದ್ಧ ಧರ್ಮದ ಪ್ರಚಾರ ಮಾಡಿದರು. ನಮಗೂ ಅನುಭವವಾಗಿರುವುದಲ್ಲದೆ 111 ಅಡಿ ಎತ್ತರದ ಬಸವ ಪುತ್ಥಳಿ ನಿರ್ಮಾಣ ಮಾಡಲು ಪ್ರೇರಣೆಯೂ ದೊರೆತಿದೆ. ಧರ್ಮಕ್ಷೇತ್ರ, ಶರಣ ಭೂಮಿ ಬಸವ ಕಲ್ಯಾಣದಲ್ಲಿ ದಿ. 28-10-2012 ರಂದು ಗುರು ಬಸವಣ್ಣನವರ 108 ಅಡಿ ಎತ್ತರದ ಅಭಯ ಹಸ್ತದ ಪುತ್ಥಳಿಯು ಲೋಕಾರ್ಪಣೆಗೊಂಡಿತಲ್ಲವೆ? ಈಗ ಜನರು ತಂಡೋಪತಂಡವಾಗಿ ದರ್ಶಿಸಲು ಬರುತ್ತಿದ್ದಾರೆ. ಜಾತಿಮತ ಪಂಥ ಭೇದವಿಲ್ಲದೆ ಮುಸಲೀಮ್, ಕ್ರೈಸ್ತರಾದಿಯಾಗಿ ಎಲ್ಲರೂ ಬರುತ್ತಿದ್ದಾರೆ. ಬಸವ ಕಲ್ಯಾಣವು ಕರ್ನಾಟಕದ ಅಂಚಿನಲ್ಲಿದ್ದು ಮಹಾರಾಷ್ಟ್ರ, ಆಂಧ್ರದ ಗಡಿಗಳಿಗೆ ಹತ್ತಿರದಲ್ಲಿ ಇರುವುದರಿಂದ ಮೂರು ರಾಜ್ಯಗಳ ಜನರು ದಿನ ನಿತ್ಯ ಸಂದರ್ಶಿಸುತ್ತಿದ್ದಾರೆ. ಸಂಜೆ 6.30 ರಿಂದ 2 ತಾಸು ವಿಶೇಷವಾದ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡುವುದರಿಂದ ಪ್ರವಾಸಿಕರು ರಾತ್ರಿಯ ವೇಳೆ ಸಹ ಸಂದರ್ಶನಕ್ಕೆ ಬರುತ್ತಾರೆ. ಇದನ್ನು ಕಂಡಾಗ ನಮ್ಮ ಉದ್ದೇಶ ಸಫಲವಾಯಿತೆಂದು ಸಂತೋಷವೆನಿಸುತ್ತದೆ. ಹೀಗೆ ಬೃಹತ್ ಶಿಲ್ಪಗಳು ಬೇಗನೆ ಜನರ ಗಮನವನ್ನು ಸೆಳೆಯುತ್ತವೆಂಬುದು ಪರಮ ಸತ್ಯ.

ಬಸವ ಗಂಗೋತ್ರಿಯಲ್ಲಿ

ಬೆಂಗಳೂರು ಕರ್ನಾಟಕದ ರಾಜಧಾನಿ ಮಾತ್ರವಲ್ಲ ಜಾಗತಿಕವಾಗಿ ಪ್ರಸಿದ್ಧಿಯನ್ನು ಪಡೆದ ನಗರ. ಎಲ್ಲ ಭಾರತೀಯರೂ ಸಮಾವೇಶವಾಗಿರುವ "ಪುಟ್ಟ ಭಾರತ" ಮಾತ್ರವಲ್ಲ ಜಗತ್ತಿನ ಎಲ್ಲ ರಾಷ್ಟ್ರಗಳವರು ಸಂದರ್ಶಿಸುವ ಸ್ಥಳ. ಬೆಂಗಳೂರಿಗೆ ಬಂದವರು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರನ್ನು ನೋಡಲು ಹೋಗದೆ ಇರಲಾರದು. ಬೆಂಗಳೂರಿನಿಂದ ಮೈಸೂರು ಹೆದ್ದಾರಿಯ ಮೇಲೆ 20ನೆಯ ಕಿಲೋಮೀಟರ್ ದೂರದಲ್ಲಿ ವಿಶ್ವಕಲ್ಯಾಣ ಮಿಷನ್ ಒಡೆತನದ **'ಬಸವ ಗಂಗೋತ್ರಿ'** ಎಂಬ ಆಶ್ರಮವಿದೆ. ಇಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣ-ನವರ ಜ್ಞಾನಪೀಠವೂ ಸ್ಥಾಪನೆಯಾಗಿ ಇದಕ್ಕೆ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ. ಇಲ್ಲಿ ಅನಾಥಾಲಯ ಮತ್ತು ವೃದ್ಧಾಶ್ರಮಗಳು ನಡೆಯುತ್ತಲಿವೆ. ತೆಂಗಿನ ತೋಟದೊಡನೆ ಸುಂದರವಾದ ಪರಿಸರ ಹೊಂದಿರುವ ಬಸವ ಗಂಗೋತ್ರಿಯಲ್ಲಿ ಗುರು ಬಸವಣ್ಣನವರ ಬೃಹತ್ ಪುತ್ಥಳಿ ಆಗಬೇಕೆಂದು ವಿಶ್ವಕಲ್ಯಾಣ ಮಿಷನ್ ಚೇರ್ಮನ್ನರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಪೇಕ್ಷಿಸಿದ್ದರು. ಬಸವ ಗಂಗೋತ್ರಿ ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲೆ

ಇರುವುದರಿಂದ ಪ್ರವಾಸಿಗರ ಗಮನವನ್ನು ಬೇಗನೆ ಸೆಳೆಯುವುದೆಂದು ಎಲ್ಲರ ಅಭಿಪ್ರಾಯ. ಒಂದು ದಿನ ಬೃಹತ್ ಪುತ್ಥಳಿಗೆ ಶಂಕುಸ್ಥಾಪನೆ ಸಹ ಮಾಡಲಾಯಿತು. ಕೆಲಸವನ್ನು ಆರಂಭಿಸಬೇಕು ಎನ್ನುವಷ್ಟರಲ್ಲಿ ನಮ್ಮ ಗಮನ ಬೇರೆಡೆ ಹರಿಯುವಂತಾಯಿತು. ಕೂಡಲ ಸಂಗಮದಲ್ಲಿ ಸಂಗಮೇಶ್ವರ ದೇವಾಲಯವನ್ನು ಸ್ಥಳಾಂತರಿಸಬೇಕು ಎನ್ನುವ ಸರ್ಕಾರದ ಪ್ರಯತ್ನದ ವಿರುದ್ಧ ಒಂದು ಚಳುವಳಿಯನ್ನು ಹಮ್ಮಿಕೊಳ್ಳಬೇಕಾಗಿ ಬಂದಿತು. ಆ ಹೋರಾಟದಲ್ಲಿ ತೊಡಗಿಸಿಕೊಳ್ಳಲು ಕೂಡಲ ಸಂಗಮಕ್ಕೆ ಹೋದಾಗ ಅಲ್ಲಿಯ ದುಃಸ್ಥಿತಿ ಕಂಡು ಕೂಡಲ ಸಂಗಮ ಕ್ಷೇತ್ರ ಅಭಿವೃದ್ಧಿಗಾಗಿ ಒಂದು ಟ್ರಸ್ಟನ್ನು ರಚಿಸಬೇಕಾಯಿತು. ಹೀಗೆ 1987ರಲ್ಲಿ ಬಸವ ಧರ್ಮ ಪೀಠ ಟ್ರಸ್ಟ್ ರೂಪುಗೊಂಡು ಕಾರ್ಯಾರಂಭ ಮಾಡಿತು.

ಬೀದರ್ ಜಿಲ್ಲೆಯ ಬಸವ ಕಲ್ಯಾಣ ಶರಣಭೂಮಿ ; 770 ಅಮರ ಗಣಂಗಳು ನಡೆದಾಡಿದ ಪುಣ್ಯಕ್ಷೇತ್ರ ಅದರ ಅಭಿವೃದ್ಧಿಯನ್ನು ಮಾಡಬೇಕು ಎಂಬ ಆಂತರಿಕ ಪ್ರೇರಣೆ ಬಂದುದರಿಂದ 2001ನೆಯ ಇಸವಿಯ ಡಿಸೆಂಬರ್ 21 ರಂದು ಬಸವ ಕಲ್ಯಾಣದಲ್ಲಿ ಹೆದ್ದಾರಿಗೆ ಹೊಂದಿಕೊಂಡಂತೆ 3 ಎಕರೆ ಜಮೀನು ಖರೀದಿಸಲಾಯಿತು.

ಹಲವಾರು ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯ ಮಾಡಲಾಗುತ್ತಿದೆ. ಬಸವೇಶ್ವರ ಧ್ಯಾನಮಂಟಪ, ಶರಣ ಗ್ರಾಮ, ಹರಳಯ್ಯ ತೀರ್ಥ, ಮಹಾಮನೆ ಮಂಟಪ – ಇವುಗಳ ಜೊತೆಗೆ ಎಲ್ಲಕ್ಕೂ ಕಳಸವಿಟ್ಟಂತೆ ಗುರು ಬಸವಣ್ಣನವರ 108 ಅಡಿ ಪುತ್ಥಳಿಯನ್ನು ನಿರ್ಮಾಣ ಮಾಡಿ ದಿ. 28-10-2012 ರಂದು ಲೋಕಾರ್ಪಣೆ ಮಾಡಲಾಯಿತು. ಕೂಡಲ ಸಂಗಮದಲ್ಲಿ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ 63 ಅಡಿ ಎತ್ತರದ ಮೂರ್ತಿಯ ನಿರ್ಮಾಣ, ಶರಣ ಧಾಮ ವಸತಿ ಗೃಹ ನಿರ್ಮಾಣ ಮುಂತಾದ ಕೆಲಸಗಳು, ಬಸವ ಕಲ್ಯಾಣದಲ್ಲಿ ಶರಣ ಗ್ರಾಮದ ನಿರ್ಮಾಣ, ಶರಣಧಾಮ ವಸತಿ ಗೃಹ ನಿರ್ಮಾಣ, ಪಾಕಶಾಲೆ, ದಾಸೋಹ ಮಂಟಪ ಮುಂತಾದ ಕೆಲಸಗಳು ಆಗುವುದು ಅಗತ್ಯವಿದೆಯಾದರೂ ಬೆಂಗಳೂರಿನ ಶರಣ ಬಂಧುಗಳು ಬಸವ ಗಂಗೋತ್ರಿಯಲ್ಲಿ ಆಗಬೇಕಾದ ಬೃಹತ್ ಪುತ್ಥಳಿಯ ನಿರ್ಮಾಣದ ಬಗ್ಗೆ ಕಾತರಿಸುತ್ತಿದ್ದಾರೆ. ಲಿಂಗೈಕ್ಯ ಪೂಜ್ಯ ಅಪ್ಪಾಜಿಯವರ ಸದಿಚ್ಛೆಯ ಬಗ್ಗೆ ನೆನಪಿಸುತ್ತಿದ್ದಾರೆ. ಹೀಗಾಗಿ 111 ಅಡಿ ಎತ್ತರದ ಬಸವ ಪುತ್ಥಳಿ ಕಾರ್ಯಯೋಜನೆಯನ್ನು ಕೈಗೆ ಎತ್ತಿಕೊಳ್ಳುವ ಸಂಕಲ್ಪ ಮಾಡಲಾಗಿದೆ.

ಮಟ್ಟಸವಾದ ಬಯಲಿನಲ್ಲಿ ಮಾಡಬೇಕಾಗಿರುವುದರಿಂದ 6 ಮೆಟ್ಟಿಲಿನ 30 ಅಡಿ ಎತ್ತರದ ಪೀಠವನ್ನು ಮಾಡಿ ಅದರ ಮೇಲೆ ಅಭಯ ಮುದ್ರೆಯ ನಿಂತ ಗುರು ಬಸವಣ್ಣನವರನ್ನು ರೂಪಿಸಲಾಗುವುದು. ಪೀಠದ ಕೆಳಭಾಗದಲ್ಲಿ ಒಂದು ಧ್ಯಾನ ಮಂಟಪವನ್ನು ಮತ್ತು ಸಪ್ತ ಗಣಾಧೀಶರ ಮೂರ್ತಿ ಸಹಿತವಾದ ಶರಣ ಮಂಟಪವನ್ನು- ಹೀಗೆ 3 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಶರಣೋದ್ಯಾನವನ್ನು ನಿರ್ಮಿಸಲಾಗುವುದು. ಧರ್ಮಪಿತ ಬಸವಣ್ಣನವರ ತತ್ತ್ವಗಳ ಪ್ರಚಾರ ಮಾಡಲು ಬೃಹತ್ ಸ್ಮಾರಕಗಳು ಸಾಧಕವಾಗುತ್ತವೆಂಬ ಮನೀಷೆಯಿಂದ ಈ ಬೃಹತ್ ಪುತ್ಥಳಿಯನ್ನು ನಿರ್ಮಿಸಲಾಗುತ್ತಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಅನಾಥಾಲಯ, ವೃದ್ಧಾಶ್ರಮಗಳಿಗೆ ಸ್ವತಂತ್ರವಾದ ಕಟ್ಟಡ ಆಗಬೇಕಾಗಿದೆ. ಆದ್ದರಿಂದ ಈ ಎಲ್ಲ ಕೆಲಸಗಳಿಗೆ ಉದಾರವಾದ ಧನಸಹಾಯದ ಅಗತ್ಯವಿದೆ. ಬಸವ ಗಂಗೋತ್ರಿಯ ಕೆಲಸಗಳು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ನಡೆಯುತ್ತಿದ್ದು ಇದಕ್ಕೆ 80ಜಿ ಇನ್‌ಕಂ ಟ್ಯಾಕ್ಸ್ ಸೌಲಭ್ಯವಿದೆ. ಆದ್ದರಿಂದ ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಲು ಅವಕಾಶವಿದೆ.

ಅವರ ಭಕ್ತ್ಯಾನುಸಾರ ಶಕ್ತ್ಯಾನುಸಾರ ಕಟ್ಟಡ ನಿಧಿಗೆ ಎಷ್ಟಾದರೂ ಕೊಡಬಹುದು.

1. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ದಾನಿಗಳ ಫಲಕದಲ್ಲಿ ಬರೆಸಲಾಗುವುದು.
2. 25,000 (ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಲಾಗುವುದು.
3. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಪ್ರತ್ಯೇಕ ಶಿಲಾಫಲಕದಲ್ಲಿ ಕೆತ್ತಿಸಲಾಗುವುದು.
4. 1,00,000 (ಒಂದು ಲಕ್ಷ) ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಪ್ರತ್ಯೇಕ ಶಿಲಾ ಫಲಕದಲ್ಲಿ ಕೆತ್ತಿಸಲಾಗುವುದಲ್ಲದೆ ಅವರ (ಅಥವಾ ಅವರು ತಿಳಿಸಿದವರ) ಭಾವಚಿತ್ರವನ್ನು ಮ್ಯೂಸಿಯಮ್‌ನಲ್ಲಿ ಪ್ರದರ್ಶಿಸಲಾಗುವುದು.
5. ಮೆಟ್ಟಿಲಿನ ಯೋಜನೆ : 30 ಅಡಿ ಎತ್ತರದ ಪೀಠವನ್ನೇರಲು ಮೆಟ್ಟಿಲುಗಳನ್ನು ಮಾಡುತ್ತಿದ್ದು 15000 ರೂ ಕೊಟ್ಟವರ ಹೆಸರನ್ನು ಮೆಟ್ಟಿಲಿನ ಮೇಲೆ ಕೆತ್ತಿಸಲಾಗುವುದು.

ಬೆಂಗಳೂರಿಗೆ ಬಂದವರು ತಪ್ಪದೆ ಸಂದರ್ಶಿಸುವಂತಹ ಬೃಹತ್ ಮೂರ್ತಿಯು ನಿರ್ಮಾಣವಾಗಲಿರುವುದರಿಂದ ಸಹೃದಯರು ತನುಮನಧನದಿಂದ ನೆರವಾಗಬೇಕೆಂದು ಕೋರುತ್ತೇವೆ.

ಬಸವ ಗಂಗೋತ್ರಿ ಸ್ಥಳ ನಿರ್ದೇಶನ :

ಬೆಂಗಳೂರು-ಮೈಸೂರು ರಸ್ತೆಯ ಮೇಲೆ ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮದ ಮಧ್ಯೆ ಬಸವ ಗಂಗೋತ್ರಿ ಪ್ರವೇಶ ದ್ವಾರವಿದೆ. ವಿನಂತಿಯ ಮೇರೆಗೆ ಬಿ.ಎಂ.ಟಿ.ಸಿ. ಬಸ್‌ಗಳು ನಿಲ್ಲುತ್ತವೆ. ಸಿಟಿ ಮಾರ್ಕೆಟ್ಟಿನಿಂದ ರೂಟ್ ನಂಬರ್ 228, 229, 231.

ಮೆಜೆಸ್ಟಿಕ್‌ನಿಂದ ಪ್ಲಾಟ್ ಫಾರಂ ನಂ.19 ರಿಂದ ಬಿಡದಿಗೆ ಹೋಗುವ ಬಸ್ಸು.

ಸಂಪರ್ಕಿಸುವ ವಿಳಾಸಗಳು :

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷರು
ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ (ರಿ)
ಬಸವ ಮಂಟಪ,
2035, 20ನೇ ಮುಖ್ಯರಸ್ತೆ,
2ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು – 560 010
ದೂರವಾಣಿ : 080-23131476, 9448137508

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬಸವ ಗಂಗೋತ್ರಿ
ಕುಂಬಳಗೋಡು – 560 074
ಕೆಂಗೇರಿ ಹೋಬಳಿ
ಬೆಂಗಳೂರು ಜಿಲ್ಲೆ.
9448386717 / 9964459500



60 ವರ್ಷಕ್ಕೆ ಪಾದಾರ್ಪಣ ಮಾಡುತ್ತಿರುವ
ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ

ಪಾದರಸದಂತೆ ಚುರುಕಾಗಿ ಓಡಾಡುತ್ತ, ಗಾಂಧೀಜಿಯವರಂತೆ ಚಟಪಟನೆ ನಡೆಯುತ್ತ ಸದಾ ಚಟುವಟಿಕೆಯಲ್ಲಿರುವ ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮಿಗಳಿಗೆ ದಿ. 20-1-2013ಕ್ಕೆ 60 ವರ್ಷ. ಗೋಕಾಕನವರಾದ ಇವರ ತಾಯಿ ಶರಣೆ. ಸಾತವ್ವ, ತಂದೆ ಶರಣ. ಮಲ್ಲಪ್ಪ ಉತ್ತಮ ಸಂಸ್ಕಾರ ನೀಡಿ ಮಕ್ಕಳನ್ನು ಬೆಳೆಸಿದರು. ಎಲ್ಲಿಯೇ ಪ್ರವಚನಗಳು ನಡೆಯಲಿ ಅಲ್ಲಿ ಶರಣೆ ಸಾತವ್ವ ಹಾಜರು. ತಾವಷ್ಟೇ ಹೋಗುತ್ತಿರಲಿಲ್ಲ ಮಕ್ಕಳನ್ನೂ ಕರೆದೊಯ್ಯುತ್ತಿದ್ದರು. ಬಾಲ್ಯದ ಹೆಸರು ಶರಣ. ಚಂದ್ರಪ್ಪ. ಬಿ.ಎ. ಓದಿ ಟೈಪಿಸ್ಟ್ ಆಗಿ ಅವರು ಗೋಕಾಕಿನ ಜೆ.ಎಸ್.ಎಸ್ ಕಾಲೇಜಿನಲ್ಲಿ 1-3-1973ರಿಂದ ಕಾಯಕ ಮಾಡತೊಡಗಿದರು. 1984ರಲ್ಲಿ ಮತ್ತು 1994ರಲ್ಲಿ ಪರಮಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಪ್ರವಚನ ನಡೆಯಿತು. ಅದರ ಪ್ರಭಾವವು ಶರಣ. ಚಂದ್ರಪ್ಪನವರ ಮೇಲೆ ಆಗಿ ಅಧ್ಯಾತ್ಮಿಕ ಸಾಧನೆ ತೀವ್ರವಾಯಿತು. ಪ್ರವಚನದ ನಂತರ ರಾಷ್ಟ್ರೀಯ ಬಸವ ದಳ ಸ್ಥಾಪನೆಯಾಯಿತು. ತುಂಬಾ ಚೆನ್ನಾಗಿ ನಡೆಯತೊಡಗಿತು. ಅಷ್ಟರಲ್ಲೆ ಸಂಪ್ರದಾಯವಾದಿ ವೀರಶೈವರು ಕಿರಿಕಿರಿ ಶುರು ಮಾಡಿದರು. ಜೆಎಸ್‌ಎಸ್ ಕಾಲೇಜಿನಲ್ಲಿ ಒಂದು ಹಾಲ್‌ನಲ್ಲಿ ನಡೆಯುತ್ತಿದ್ದ ಪ್ರಾರ್ಥನಾ ಸಭೆಗೆ ವಿಘ್ನ ಬಂದಿತು. ಅಂಥ ಸಂದರ್ಭದಲ್ಲಿ ಶರಣ. ಚಂದ್ರಪ್ಪ ಅವರು ತಮ್ಮ ವಾಸದ ಮನೆಯ ಮುಂದಿದ್ದ ಬಯಲಿನಲ್ಲಿ ಒಂದು ಚಿಕ್ಕ ಬಸವ ಮಂಟಪ ಕಟ್ಟಿ ಪ್ರಾರ್ಥನೆ ಸಾಗುವಂತೆ ಮಾಡಿದರು. ಅಂತಹ ತ್ಯಾಗಬುದ್ಧಿ ಇವರದು.

ಸನ್ಯಾಸವನ್ನು ತೆಗೆದುಕೊಳ್ಳುವ ಅಚಲ ನಿರ್ಧಾರ ಮಾಡಿ ದಿ.29-3-1998ರಂದು. ಅಂದು ಅಲ್ಲಮಪ್ರಭು ಜಯಂತಿ, ಜಂಗಮ ದೀಕ್ಷೆಯನ್ನು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಂದ ಪಡೆದುಕೊಂಡು **ಪೂಜ್ಯಶ್ರೀ ಬಸವ ಕುಮಾರ ಸ್ವಾಮೀಜಿ** ಆದರು. ದಿ.30-9-1998ರಂದು ನೌಕರಿಗೆ ಸ್ವಯಂ ನಿವೃತ್ತಿ ಘೋಷಿಸಿದರು. 6ನೆಯ ಬಸವ ಧರ್ಮ ಸಮ್ಮೇಳನವು ಗೋಕಾಕ್‌ನಲ್ಲಿ 2 ದಿವಸಗಳ ಕಾಲ 1998ರ ಮೇ ತಿಂಗಳಲ್ಲಿ ಜರುಗಿತು. ಇದರ ಸಂಪೂರ್ಣ ಸಂಘಟನೆಯ ಭಾರವನ್ನು ಪೂಜ್ಯಶ್ರೀ ಬಸವ ಕುಮಾರ ಸ್ವಾಮಿಗಳು ಹೊತ್ತು ಯಶಸ್ವಿಗೊಳಿಸಿ ಸಮರ್ಥ ಸಂಘಟಕರೆಂಬುದನ್ನು ದೃಢಪಡಿಸಿದರು.

ಪೂಜ್ಯ ಸ್ವಾಮೀಜಿ ಭಾವುಕರು. ಒಬ್ಬ ಲೌಕಿಕ ಶ್ರೀಮಂತರ ಸಾಲದ ಜವಾಬ್ದಾರಿ ಹೊತ್ತು ತಮ್ಮ ಮನೆಯನ್ನೇ ಬ್ಯಾಂಕಿಗೆ ಅಡವಿಟ್ಟು ತೊಂದರೆಗೆ ಒಳಗಾದರು. ಆ ಶ್ರೀಮಂತರು ತಮ್ಮ ಕಷ್ಟವೆಲ್ಲ ತೀರಿದ ಬಳಿಕವೂ ಪೂಜ್ಯ ಸ್ವಾಮೀಜಿಯವರಿಗೆ ಸಲ್ಲಿಸಬೇಕಾದ ಕಾಣಿಕೆ ಸಲ್ಲಿಸಲಿಲ್ಲ. ಆಗ ಇವರಿಗೆ ಸತ್ಯವು ಮನವರಿಕೆಯಾಯಿತು; ಇಂಥ ಅವ್ಯಾವಹಾರಿಕ ಸಹಾಯಕ್ಕೆ ಸನ್ಯಾಸಿಯಾದ ತಾನು ಕೈಹಾಕಬಾರದಾಗಿತ್ತೆಂದು ಅರಿತುಕೊಂಡರು. ನಂತರ ಪೂರ್ವಾಶ್ರಮ ವನ್ನು ತೊರೆದು ಬಸವ ಧರ್ಮ ಪೀಠಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡು ಸೇವೆ ಮಾಡುತ್ತಲಿದ್ದಾರೆ. 1973ರಿಂದಲೂ ಲಿಂಗಾಂಗಯೋಗದ ಸಾಧನೆಯಲ್ಲಿ ತೊಡಗಿ ಕೊಂಡಿದ್ದಾರೆ. ಮನೆಯಲ್ಲೇ ಸಾಧನೆಯನ್ನು ಶುರು ಮಾಡಿದರು; ದೀಕ್ಷಾನಂತರ ಸಾಧನೆ ತೀವ್ರವಾಯಿತು. ಅಕ್ಕಮಹಾದೇವಿ ತಾಯಿಯವರ ಯೋಗಾಂಗ ತ್ರಿವಿಧಿ ಕುರಿತು ಅಮೋಘವಾಗಿ ಪ್ರವಚನ ನೀಡುತ್ತಾರೆ. ತ್ಯಾಗಿಗಳೂ, ಯೋಗಿಗಳೂ ಆದ ಪೂಜ್ಯಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿಯವರು ಬಸವ ಧರ್ಮ ಪೀಠಕ್ಕೆ ಒಂದು ಅಮೂಲ್ಯ ಜಂಗಮ ಆಸ್ತಿ. ಅವರಿಗೆ ಸೃಷ್ಟಿಕರ್ತ ಲಿಂಗದೇವ ಹಾಗೂ ಧರ್ಮಗುರು ಬಸವಣ್ಣನವರು ಹೆಚ್ಚಿನ ಆಯುಷ್ಯ, ಆರೋಗ್ಯ, ಭಾಗ್ಯ ಸಕಲ ಸಂಪತ್ತನ್ನು ನೀಡಲೆಂದು ಹಾರೈಸೋಣ.

–ರಮೇಶ ತಳ್ಳಿ

ವಿಶ್ವಜ್ಯೋತಿ ಅಕ್ಕಮಹಾದೇವಿಯವರ ದಿವ್ಯ ನಿಲುವು

ತನುವಿನೊಳಗಿದ್ದು ತನುವ ಗೆದ್ದಳು
ಮನದೊಳಗಿದ್ದು ಮನವ ಗೆದ್ದಳು
ವಿಷಯದೊಳಗಿದ್ದು ವಿಷಯಂಗಳ ಗೆದ್ದಳು
ಅಂಗಸುಖವ ತೊರೆದು ಭವವ ಗೆದ್ದಳು
ಕೂಡಲ ಚೆನ್ನ ಸಂಗಯ್ಯನ, ಹೃದಯಕಮಲ ಬಗೆದು ಹೊಕ್ಕು
ನಿಜಪದವನೈದಿದ ಮಹಾದೇವಿಯಕ್ಕನ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು. —ಚೆನ್ನಬಸವಣ್ಣನವರು

ಶ್ರೀಗುರು ಅಕ್ಕ ಮಹಾದೇವಿ ತಾಯಿ ಸ್ತ್ರೀ ಕುಲದ ತಿಲಕವಷ್ಟೇ ಅಲ್ಲ, ಅವರು ಮನುಕುಲದ ಮಾಣಿಕ್ಯ. ಸ್ವಾಭಾವಿಕವಾಗಿ ದೇವನ ಒಲುಮೆಗೆ ಮೊರೆಹೋದ ಮಹಾಭಕ್ತೆ. ಜನಪ್ರಿಯತೆ, ತತ್ವಜ್ಞಾನ ಮತ್ತು ಅನುಭಾವದಲ್ಲಿ ಅಕ್ಕನವರ ವಚನಗಳು ಗುರು ಬಸವಣ್ಣನವರ ವಚನಗಳ ನಂತರದ ಸ್ಥಾನದಲ್ಲಿ ನಿಲ್ಲುತ್ತವೆ.

ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನವು ಐದು ವಚನ
ಅಜಗಣ್ಣನವು ಐದು ವಚನಕ್ಕೆ ಕೂಡಲಚೆನ್ನಸಂಗಮದೇವಾ,
ಮಹಾದೇವಿಯಕ್ಕಗಳದೊಂದೆ ವಚನ. ಚೆ.ಬ.ವ.ಸಂ-೨೨೧

ಎನ್ನುವ ಗುರು ಚೆನ್ನಬಸವಣ್ಣನವರ ವಚನವು ಅಕ್ಕನ ಅನುಭಾವಪೂರಿತ ವಚನಗಳ ಮಹತಿಯನ್ನು ಸಾರುತ್ತದೆ. ಆದರೆ ಅನೇಕ ಜನ ಸಾಹಿತಿಗಳು ಕೇವಲ ಶಬ್ದಜಾಲದಲ್ಲಿ ಸಿಕ್ಕ ಪಂಡಿತರು ಮತ್ತು ಶುಷ್ಕ ಸಾಹಿತಿಗಳೇ ಹೊರತು ಅನುಭಾವಿಗಳಲ್ಲ. ಅವರು ವಚನಗಳಲ್ಲಿಯ ಶಬ್ದಗಳನ್ನು ಗ್ರಹಿಸಬಲ್ಲವರೇ ಹೊರತು ಅದರಲ್ಲಿರುವ ಅನುಭಾವದ ಸ್ವಾದವನ್ನು ಗ್ರಹಿಸಬಲ್ಲವರಲ್ಲ.

ಕುರಿವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕು
ತೆರನನರಿಯದೆ ತನಿರಸದ
ಹೊರಗಣ ಎಲೆಯನೆ ಮೆಲಿದುವು!
ನಿಮ್ಮನರಿವ ಮದಕರಿಯಲ್ಲದೆ
ಕುರಿ ಬಲ್ಲುದೆ ಲಿಂಗದೇವಾ?

ಎನ್ನುವ ಗುರು ಬಸವಣ್ಣನವರ ನುಡಿಯಂತೆ ಕೇವಲ ತೋರು ಅರ್ಥವನ್ನು ಅರ್ಥೈಸಿ ಅನರ್ಥ ಮಾಡುತ್ತಾರೆ. ಅಕ್ಕನ ಉನ್ನತವಾದ ಮನಸ್ಸು ಮತ್ತು ಭಾವನೆಯನ್ನು ಅರ್ಥ ಮಾಡಿಕೊಳ್ಳದೆ, ಅಕ್ಕನ ಭಾವನೆಯನ್ನು ತಮ್ಮ ಮನಸ್ಸಿನ ಮಟ್ಟಕ್ಕೆ ಇಳಿಸಿಕೊಳ್ಳುತ್ತಾರೆ. ಅಕ್ಕನವರು ಸಾಧಕಾವಸ್ಥೆಯಲ್ಲಿ ಬರೆದ "ಒಮ್ಮೆ ಕಾಮನ ಕಾಲ ಹಿಡಿವೆ, ಮತ್ತೊಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ. ಸುಡಲೀ ವಿರಹವ! ನಾನಾರಿಗೆ ಧೃತಿಗೆಡುವೆ? ಚೆನ್ನ ಮಲ್ಲಿಕಾರ್ಜುನ ದೇವನು ಎನ್ನನೊಲ್ಲದ ಕಾರಣ ಎಲ್ಲರಿಗೆ ಹಂಗುಗಿತ್ತಿಯಾದೆನವ್ವಾ"; "ಅಳಿಸಂಕುಳವೆ ಮಾಮರವೆ, ಬೆಳುದಿಂಗಳೆ, ಕೋಗಿಲೆಯೆ ನಿಮ್ಮನೆಲ್ಲರನೂ ಒಂದ ಬೇಡುವೆನು, ಎನ್ನೊಡೆಯ ಚೆನ್ನ ಮಲ್ಲಿಕಾರ್ಜುನದೇವರ ದೇವನ ಕಂಡಡೆ ಕರೆದು ತೋರಿರೆ." ಎನ್ನುವಂಥ ವಚನಗಳನ್ನು ಅಕ್ಕನು ಪರಿಪೂರ್ಣತೆಯನ್ನು ಹೊಂದಿ ಬಸವ ಧರ್ಮ ಪ್ರಚಾರ ಮಾಡುತ್ತ ಕದಳಿಯ ಕಡೆಗೆ ಹೋಗುವ ಸಂದರ್ಭದಲ್ಲಿ ಬರೆದರೆಂದೂ, ಕೊನೆಯವರೆಗೂ ಅವರಿಗೆ ಅನಾಥ ಪ್ರಜ್ಞೆಯೇ

ಕಾಡಿತ್ತೆಂದು ಬರೆದು ಅಕ್ಕನ ದಿವ್ಯವಾದ ವ್ಯಕ್ತಿತ್ವವನ್ನು ಮತ್ತು ನಿರಾಕಾರನಾದ ಚೆನ್ನಮಲ್ಲಿಕಾರ್ಜುನದೇವರ ದೇವನ ಸಾಕ್ಷಾತ್ಕಾರ ಪಡೆದುಕೊಂಡಿರುವುದನ್ನು ಮರೆಮಾಚುತ್ತಾರೆ. ಅದಕ್ಕಾಗಿ ಅಕ್ಕನ ವಚನಗಳ ಭಾವವನ್ನು ಗುರುತಿಸಿ ಅವರು ಬರೆದ ಕ್ರಮದಲ್ಲಿಯೇ ವಚನಗಳನ್ನು ಜೋಡಿಸಬೇಕು ಎಂಬ ಆಲೋಚನೆ ಮೂಡಿದಾಗ ಮೈದಳೆದ ಕೃತಿಯೇ "ಅಕ್ಕನ ಸಮಗ್ರ ವಚನಗಳು ಮತ್ತು ಯೋಗಾಂಗ ತ್ರಿವಿಧಿ". ಪೂಜ್ಯ ಮಾತಾಜಿಯವರು ಬರೆದ 'ತರಂಗಿಣಿ' ಮತ್ತು ಪೂಜ್ಯ ಅಪ್ಪಾಜಿಯವರು ಬರೆದ 'ಅಕ್ಕನ ಪ್ರವಚನ' ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಅಕ್ಕನ ಜೀವನಕ್ರಮ(Chronologically)ಕ್ಕನುಗುಣವಾಗಿ ಅವರು ಬರೆದ ಕ್ರಮದಲ್ಲಿಯೇ ವಚನಗಳನ್ನು ಜೋಡಿಸಿದ್ದೇನೆ. ವಚನಗಳನ್ನು ಆಳವಾಗಿ ಅಧ್ಯಯನ ಮಾಡುತ್ತ, ವಿಂಗಡಣೆ ಮಾಡುತ್ತ ಸಾಗಿರುವಾಗಲೇ "ಅಕ್ಕನವರು ಶಿವನ(ಏಕದೇವತಾ) ಉಪಾಸನೆಯಿಂದ ನಿರಾಕಾರವಾದ ಲಿಂಗದೇವನ ಉಪಾಸನೆ (ಏಕದೇವೋಪಾಸನೆ)ಗೆ ಪರಿವರ್ತನೆಗೊಂಡಾಗ ಉಪಯೋಗಿಸಿದ ಎರಡನೇ ವಚನಾಂಕಿತವು ನನ್ನ ಗಮನಕ್ಕೆ ಬಂದಿತು. ಅದುವೇ "ಚೆನ್ನಮಲ್ಲಿಕಾರ್ಜುನದೇವರ ದೇವಾ" ಹೀಗಾಗಿ "ಅಕ್ಕನ ಸಮಗ್ರ ವಚನಗಳು ಮತ್ತು ಯೋಗಾಂಗ ತ್ರಿವಿಧಿ" ಗ್ರಂಥದಲ್ಲಿ ಅಕ್ಕನವರು ಶಿವಭಕ್ತೆಯಾಗಿ ಬರೆದ ಸುಮಾರು ೬೧ ವಚನಗಳಲ್ಲಿ ಚೆನ್ನಮಲ್ಲಿಕಾರ್ಜುನ/ ಚೆನ್ನಮಲ್ಲಿಕಾರ್ಜುನ ದೇವಾ ವಚನಾಂಕಿತವನ್ನು ಹಾಗೆಯೇ ಇಟ್ಟಿದ್ದೇನೆ. ಲಿಂಗದೇವನ ಭಕ್ತಿಗೆ ಪರಿವರ್ತನೆಯಾದ ನಂತರದಲ್ಲಿ ಬರೆದ ವಚನಗಳಲ್ಲಿ "ಚೆನ್ನಮಲ್ಲಿಕಾರ್ಜುನದೇವರ ದೇವಾ" ಎನ್ನುವ ವಚನಾಂಕಿತವನ್ನು ಪ್ರಯೋಗ ಮಾಡಿದ್ದೇನೆ. ಇದನ್ನೇ ಅನೇಕರು ವಚನಾಂಕಿತ ತಿರುಚಿದ್ದೇನೆ ಎಂದು ಪತ್ರಿಕೆಗಳಲ್ಲಿ ಹುಯಿಲೆಬ್ಬಿಸಿದರು.

ಅಕ್ಕನ ಜೀವನವು ತೆಂಗಿನ ಮರದಂತೆ ಹಂತ ಹಂತವಾಗಿ ಸುಳಿದೆಗೆದು ಬೆಳೆದುಬಂದಿದೆ, ಬಾಲ್ಯದಲ್ಲಿ ಶಿವನ ಬಗ್ಗೆ ಭಕ್ತಿ ಬೆಳೆದು ದೊಡ್ಡವರಾದ ಮೇಲೆ ದೇವನ ಕರುಣೆಗೆ ಹಂಬಲಿತರಾಗಿ ತಮ್ಮ ಕಾಯ, ಕರಣ, ಜೀವ, ಭಾವ, ಮನ, ಪ್ರಾಣಗಳನ್ನೆಲ್ಲಾ ದೇವರಿಗೆ ಸಮರ್ಪಿಸಿಕೊಂಡು ದೇವನ ಭಕ್ತಿಯಲ್ಲಿ ತಲ್ಲೀನಳಾಗಿರುತ್ತಾರೆ. ಅನಿರೀಕ್ಷಿತವಾಗಿ ಕೌಶಿಕ ರಾಜನು ಅಕ್ಕನನ್ನು ಕಂಡು ವ್ಯಾಮೋಹಿತನಾಗಿ ಮದುವೆಗೆ ಪ್ರಸ್ತಾಪವಿಡುತ್ತಾನೆ. ಅಕ್ಕ ಅದನ್ನು ಖಡಾಖಂಡಿತವಾಗಿ ತಿರಸ್ಕರಿಸುತ್ತಾರೆ. ಅಂದಿನ ಕಾಲದಲ್ಲಿ ಇಂದಿನಂತೆ ಪ್ರಜಾಪ್ರಭುತ್ವದ ವ್ಯವಸ್ಥೆ ಇರಲಿಲ್ಲ. ಅರಸನೇ ಸಾರ್ವಭೌಮನಾಗಿದ್ದ ಕಾಲವದು. ಅವನು ನುಡಿದುದೇ ಕಾನೂನು-ಕಟ್ಟಳೆಯಾಗಿತ್ತು. ಹೀಗಾಗಿ ರಾಜದಂಡವನ್ನು ಉಪಯೋಗಿಸಿ ಅಕ್ಕನ ತಂದೆ-ತಾಯಿಯರನ್ನು ಅರಮನೆಯ ಗೃಹಬಂಧನದಲ್ಲಿ ಇರಿಸುತ್ತಾನೆ. ಅದಕ್ಕಾಗಿ ಅಕ್ಕ ಈ ಸಂದಿಗ್ಧ ಪರಿಸ್ಥಿತಿಯಿಂದ ಉಪಾಯದಿಂದ ಹೊರ ಬರಬೇಕೆಂದು ಆಲೋಚಿಸಿ ಗುರುಗಳಾದ ಗುರುಲಿಂಗದೇವರ ಮಾರ್ಗದರ್ಶನದಂತೆ ಮೂರು ಕರಾರುಗಳನ್ನು ಹಾಕಿ ಕೌಶಿಕ ರಾಜನ ಅರಮನೆಗೆ ಹೋಗುತ್ತಾಳೆ. ರಾಜ್ಯದ ಕ್ಷೇಮಕ್ಕಾಗಿ ಮತ್ತು ಆತ್ಮೋದ್ಧಾರಕ್ಕಾಗಿ ಐದು ವಾರಗಳ ಕಾಲ ಗುರು-ಲಿಂಗ-ಜಂಗಮರ ಪೂಜಾದಿಗಳನ್ನು ಕೈಗೊಂಡುದ್ದಾಗಿ ಹೇಳಿ ಆ ಐದು ವಾರಗಳ ಕಾಲವೂ ತಾನು ಯಾರನ್ನೂ ಮುಟ್ಟಿಸಿಕೊಳ್ಳುವುದಿಲ್ಲ ಮತ್ತು ತನ್ನ ಮೇಲೆ ರಾಜನು ಬಲವಂತ ಮಾಡುವಂತಿಲ್ಲ ಎಂದು ಹೇಳುತ್ತಾಳೆ. ಐದು ವಾರಗಳಲ್ಲಿ ನಡೆಸುವ ಗುರು-ಲಿಂಗ-ಜಂಗಮರ ಪೂಜೆ ಮತ್ತು ದಾಸೋಹಗಳಿಗೆ ಅಡ್ಡಿ ಆತಂಕವನ್ನುಂಟು ಮಾಡಬಾರದು. ಒಂದು ವೇಳೆ ಈ ಕರಾರುಗಳನ್ನು ಮುರಿದರೆ ಆಗ ತನಗೂ ಅರಮನೆಗೂ ಯಾವ ಸಂಬಂಧವೂ ಇರುವುದಿಲ್ಲ ಎಂದು ಎಚ್ಚರಿಸಿ ಅರಮನೆಗೆ ಹೋಗುತ್ತಾರೆ. ಅಲ್ಲಿ ಪೂಜೆ, ಧ್ಯಾನ, ಅನುಷ್ಠಾನಗಳನ್ನು ಮಾಡುತ್ತಾ ದೇವನ ಕರುಣೆಗಾಗಿ ಹಂಬಲಿಸುತ್ತಾ ಅನೇಕ ವಚನಗಳನ್ನು ಬರೆದಿದ್ದಾರೆ.

ಅನೇಕ ಸಾಹಿತಿಗಳು ಕೌಶಿಕ ರಾಜನೊಂದಿಗೆ ಅಕ್ಕನ ವಿವಾಹವಾಯಿತೆಂದು ಬರೆಯುತ್ತಾರೆ. ಇದು ಶುದ್ಧ ತಪ್ಪು ಮತ್ತು ಅಕ್ಕನ ವ್ಯಕ್ತಿತ್ವಕ್ಕೆ ಮಾಡುವ ಅಪಚಾರ. ಅಕ್ಕನ ಆತ್ಮಕಥನವೇ ಆಗಿರುವ ಅವರ ವಚನಗಳು ಇದನ್ನು ಸಾರಿ ಸಾರಿ ಹೇಳುತ್ತವೆ. ಕೌಶಿಕನು ಪ್ರತಿ ಸಲವೂ ಅಕ್ಕನನ್ನು ಬಲವಂತವಾಗಿ ಒಲಿಸಿಕೊಳ್ಳಲೆತ್ನಿಸಿದಾಗಲೆಲ್ಲ ಕೌಶಿಕನಿಗೆ ಕೊಟ್ಟ ಎಚ್ಚರಿಕೆಯ ರೂಪದ ವಚನಗಳು ಅಕ್ಕನ ಮದುವೆ ಕೌಶಿಕನೊಂದಿಗೆ ಆಗಿಲ್ಲವೆಂಬುದನ್ನು ದುಂದುಭಿಯಂತೆ ಹೇಳುತ್ತವೆ.

"ಹಿಡಿಯದಿರು ತಡೆಯದಿರು ಬಿಡುಬಿಡು ಕೈಸೆರಗ.
ಭಾಷೆಯ ಬರೆದುಕೊಟ್ಟ ಸತ್ಯಕ್ಕೆ ತಪ್ಪಿದರೆ
ಅಘೋರ ನರಕವೆಂದರಿಯೆಯಾ?
ಚೆನ್ನಮಲ್ಲಿಕಾರ್ಜುನದೇವರ ದೇವನ ಕೈವಿಡಿದ ಸತಿಯ ಮುಟ್ಟಿದರೆ
ಕೆಡುವೆ ಕಾಣಾ ಮರುಳೆ"

"ಚೆನ್ನಮಲ್ಲಿಕಾರ್ಜುನದೇವರ ದೇವಂಗೆ ಒಲಿದವಳ
ನೀನಪ್ಪಿಹೆನೆಂದಡೆ ಒಣಗಿದ ಮರವನಪ್ಪುವಂತೆ ಕಾಣಾ"

"ಒಲ್ಲೆ ಹೋಗು ಸೆರಗ ಬಿಡು ಮರುಳೆ.
ಎನಗೆ ಚೆನ್ನಮಲ್ಲಿಕಾರ್ಜುನದೇವರ ದೇವನು
ಒಲಿವನೊ ಒಲಿಯನೊ ಎಂಬ ಚಿಂತೆ!"

"ಬಿಡು ಬಿಡು ಕೈಯ; ನರಕವೆಂದರಿಯದೆ ತಡೆವರೆ ಮನುಜಾ?
ಚೆನ್ನಮಲ್ಲಿಕಾರ್ಜುನದೇವರ ದೇವನ ಪೂಜೆಯ ವೇಳೆ ತಪ್ಪಿದರೆ
ನಾಯಕ ನರಕ ಕಾಣಾ ನಿನಗೆ"

ಕೊನೆಗೆ ಕೌಶಿಕನು ಮೂರನೆಯ ತಪ್ಪನ್ನೂ ಮಾಡಿ ಅಕ್ಕನ ಸೀರೆಯ ಸೆರಗನ್ನು ಹಿಡಿದೆಳೆದಾಗ-

ಕೈಸಿರಿಯ ದಂಡವ ಕೊಳಬಹುದಲ್ಲದೆ
ಮೈಸಿರಿಯ ದಂಡವ ಕೊಳಲುಂಟೆ?
ಉಟ್ಟಂತಹ ಉಡಿಗೆ ತೊಡಿಗೆಯನೆಲ್ಲ ಸೆಳದುಕೊಳ್ಳಬಹುದಲ್ಲದೆ
ಮುಚ್ಚಿ ಮುಸುಕಿರ್ದ ನಿರ್ವಾಣವ ಸೆಳೆದುಕೊಳ್ಳಬಹುದೆ?
ಚೆನ್ನಮಲ್ಲಿಕಾರ್ಜುನದೇವರ ದೇವನ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ
ಉಡುಗೆ ತೊಡುಗೆಗಳ ಹಂಗೇಕೊ ಮರುಳೆ?

ಎಂದು ತಾನುಟ್ಟ ಸೀರೆಯನ್ನು ಬಿಚ್ಚಿ ಕೌಶಿಕನ ಮುಖದ ಮೇಲೆ ಎಸೆಯುತ್ತಾರೆ.

ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ,
ಎಲುವಿನ ತಡಿಕೆ, ಕೀವಿನ ಹಡಿಕೆ
ಸುಡಲೀ ದೇಹವ; ಒಡಲುವಿಡಿದು ಕೆಡದಿರು,
ಚೆನ್ನಮಲ್ಲಿಕಾರ್ಜುನದೇವರ ದೇವನನರಿ ಮರುಳೆ.

ಎಂದು ಉಪದೇಶವನ್ನು ಮಾಡಿ ಅರಮನೆಯಿಂದ ಹೊರಬಿದ್ದು ಕಲ್ಯಾಣದ ಗುರುಮನಯೆಡೆಗೆ ಹೊರಡುತ್ತಾರೆ.

ಅಕ್ಕ ಕಲ್ಯಾಣಕ್ಕೆ ದೇವ ವಿರಹಿಯಾಗಿ ಹೋಗಿ ಗುರುಬಸವಣ್ಣನವರಿಂದ ಜಂಗಮದೀಕ್ಷೆಯನ್ನು ಪಡೆದು ಕಾವಿಯ ಸೀರೆಯನ್ನು ತೊಟ್ಟರು. ಶರಣರ ಸಂಗದಲ್ಲಿ ಗುರುಬಸವಣ್ಣನವರ ಮಾರ್ಗದರ್ಶನದಲ್ಲಿ ಸಾಧನೆಗೈದು ಪಿಂಡಾಂಡ ಬ್ರಹ್ಮಾಂಡಗಳೆರಡರಲ್ಲಿಯೂ ಆ ದೇವನೊಬ್ಬನ ಚೈತನ್ಯವೇ ಓತ ಪ್ರೋತವಾಗಿ

ಹರಿದಾಡುತ್ತಿರುವುದನ್ನು ಕಂಡು ಭಾವಲಿಂಗೈಕ್ಯ ಸ್ಥಿತಿಯನ್ನು ದಾಟಿ ಮಹಾಭಕ್ತಸ್ಥಲದಲ್ಲಿ ನಿಲ್ಲುತ್ತಾರೆ.

ಹಸಿವು ತೃಷೆಗಳೆಲ್ಲವನ್ನು ತೊಡೆದುಹಾಕಿ ದೀರ್ಘಕಾಲದವರೆಗೆ ಆ ಲಿಂಗದೇವನ ಹೃದಯದಲ್ಲಿ ಸಮರಸದ ಆನಂದವನ್ನು ಹೊಂದಬೇಕು ಎಂದು ಶ್ರೀಶೈಲದ ಸನಿಹ ದಲ್ಲಿರುವ ಕದಳಿವನಕ್ಕೆ ಹೋಗುತ್ತಾರೆಯೇ ಹೊರತು ಶ್ರೀಶೈಲ ಚೆನ್ನಮಲ್ಲಿಕಾರ್ಜುನನನ್ನು ಅರಸಿಕೊಂಡು ಅಲ್ಲ. ಜೊತೆಗೆ ಲಿಂಗೈಕ್ಯವಾದ ನಂತರ ಜನ ತನ್ನ ಲಿಂಗೈಕ್ಯಮಂಟಪವನ್ನು ಕಟ್ಟಿ ದೇವತೆಯನ್ನಾಗಿ ಮಾಡಿ, ಆ ಮೂರ್ತಿಗೆ ಕುಂಕುಮ, ಅರಸಿಣ, ಮೂಗುತಿ, ಬಳೆಗಳನ್ನು ಮೂಢ ಜನತೆಯಿಂದ ತೊಡಿಸಿಕೊಳ್ಳುವುದು ಅಕ್ಕನಿಗೆ ಇಷ್ಟವಾಗದೆ ಇರುವ ವಿಚಾರ ಹೀಗಾಗಿ ಅಕ್ಕ ಜಡದೇಹವನ್ನು ನಿರ್ಜನ ಪ್ರದೇಶದಲ್ಲಿ ಬಿಡಬೇಕು ಎಂದು ಕದಳಿವನಕ್ಕೆ ಹೋದರೇ ಹೊರತು ಶ್ರೀಶೈಲ ಚೆನ್ನಮಲ್ಲಿಕಾರ್ಜುನನನ್ನು ಅರಸಿಕೊಂಡು(ಅನೇಕ ಜನ ಸಾಹಿತಿಗಳು ಬರೆಯುವಂತೆ) ಅಲ್ಲವೇ ಅಲ್ಲ.

ಅಕ್ಕಮಹಾದೇವಿಯವರ ವಚನಾಂಕಿತ 'ಚೆನ್ನಮಲ್ಲಿಕಾರ್ಜುನ'/ 'ಚೆನ್ನಮಲ್ಲಿಕಾರ್ಜುನದೇವರ ದೇವಾ' ಕುರಿತು ಒಂದು ಚಿಂತನೆ

ಹನ್ನೆರಡನೆ ಶತಮಾನದ ಶರಣರನ್ನು ಮುಖ್ಯವಾಗಿ ಎರಡು ವಿಧವಾಗಿ ವಿಂಗಡಿಸಬಹುದು. ಮೊದಲನೆಯವರು ಶೈವ ಧರ್ಮದ ಶಿವಭಕ್ತಿಯಿಂದ ಲಿಂಗಾಯತ ಧರ್ಮದ ಲಿಂಗದೇವನ ಭಕ್ತಿಗೆ ಪರಿವರ್ತನೆಯಾದವರು. ಎರಡನೆಯವರು ನೇರವಾಗಿ ಲಿಂಗಾಯತರಾಗಿ ಲಿಂಗದೇವನ ಭಕ್ತರಾದವರು. ಸ್ವತಃ ಧರ್ಮಗುರು ಬಸವಣ್ಣನವರು ಬಾಲ್ಯದಲ್ಲಿ ಅಪಾರವಾದ ಶಿವಭಕ್ತಿಯನ್ನು ಮೈಗೂಡಿಸಿಕೊಂಡು ಶಿವನ ಪ್ರತಿರೂಪವಾದ ಕೂಡಲಸಂಗಮದೇವನ ಆರಾಧಕರಾಗಿ ತಮ್ಮ ಪ್ರೀತಿಯ ದೇವರಾದ ಕೂಡಲ ಸಂಗಮದೇವ ಎನ್ನುವ ವಚನಾಂಕಿತದೊಂದಿಗೆ ಬಾಲ್ಯದಲ್ಲಿಯೇ ವಚನಗಳನ್ನು ಬರೆಯಲು ಆರಂಭಿಸಿದರು. ಕೂಡಲಸಂಗಮದಲ್ಲಿ ವಿದ್ಯಾರ್ಜನೆಯನ್ನು ಮಾಡುತ್ತಾ ಕೂಡಲಸಂಗಮದೇವನನ್ನು ಆರಾಧಿಸುತ್ತ ಅಧ್ಯಾತ್ಮ ಸಾಧನೆಯನ್ನು ಮಾಡತೊಡಗಿದರು. ಅವರು ಪ್ರೌಢಮತಿಗಳಾಗುತ್ತ ಹೋದಂತೆ ಅವರ ಹೃದಯದಲ್ಲಿ ದೇವರ ಬಗ್ಗೆ ಹೊಸದಾದ ಕಲ್ಪನೆಯೊಂದು ಮೂಡಲಾರಂಭಿಸಿತು. ಅದೊಂದು ದಿನ ಗುರು ಬಸವಣ್ಣನವರಿಗೆ ಸೃಷ್ಟಿಕರ್ತ ಪರಮಾತ್ಮನ ದಿವ್ಯ ದರ್ಶನ ಮತ್ತು ಅನುಗ್ರಹವಾಯಿತು. ಅಂದಿನಿಂದ ಜಗದಗಲ ಮುಗಿಲಗಲ ಮಿಗೆಯಗಲವಾದ, ಪಾತಾಳ ಮತ್ತು ಬ್ರಹ್ಮಾಂಡಗಳಿಗೂ ಮೀರಿ ನಿಂದ, ಅಗಮ್ಯ ಅಗೋಚರ ಅಪ್ರತಿಮನಾದ ಸೃಷ್ಟಿಕರ್ತ ಪರಮಾತ್ಮನೇ ಬೇರೆ, ಯೋಗಿರಾಜನಾದ ಶಿವನೇ ಬೇರೆ ಎಂದು ಅರಿತು ಅಂತಹ ಪರಮಾತ್ಮನನ್ನು 'ಲಿಂಗದೇವ' ಎಂದು ಕರೆದು ಇಷ್ಟಲಿಂಗವನ್ನು ಕಂಡು ಹಿಡಿದು ಅದನ್ನು ತಾವೇ ಮೊದಲು ಧರಿಸಿ ಶಿವಭಕ್ತಿಯಿಂದ ಲಿಂಗದೇವನ ಭಕ್ತಿಗೆ ಪರಿವರ್ತನೆಯಾಗಿ ಲಿಂಗಾಯತ ಧರ್ಮದ ಸಂಸ್ಥಾಪಕರಾಗಿ ಜಗತ್ತಿನ ಪ್ರಥಮ ಲಿಂಗಾಯತರಾದರು. ಯೋಗಿ ಶಿವನ ಆರಾಧಕರಾಗಿದ್ದಾಗ 'ಕೂಡಲ ಸಂಗಮದೇವಾ' ಎನ್ನುವ ವಚನಾಂಕಿತ ಬಳಸಿದ್ದು, ನಂತರ ನಿರಾಕಾರ(ಏಕ)ದೇವೋಪಾಸನೆಗೆ ಮಾನಸಾಂತರ ಹೊಂದಿದಾಗ 'ಲಿಂಗದೇವಾ' ಎನ್ನುವ ವಚನಾಂಕಿತವನ್ನು ಗುರುಬಸವಣ್ಣನವರು ಬಳಸಿದ್ದಾರೆ ಎನ್ನುವ ಸತ್ಯವನ್ನು ಪೂಜ್ಯ ಮಾತಾಜಿಯವರು ಸಂಶೋಧಿಸಿರುವರು.

ಗುರುಬಸವಣ್ಣನವರ ಸಮಕಾಲೀನವರಾದ ಲಿಂಗಾಯತ ಧರ್ಮ ಸ್ವೀಕಾರ ಮಾಡಿದ ಅನೇಕ ಶರಣರು ಕೂಡ ಶಿವಭಕ್ತಿಯ ಪಥದಲ್ಲಿದ್ದವರೆ. ಅವರಲ್ಲಿ ಮುಖ್ಯವಾದವರು ಶಿವಯೋಗಿ ಸಿದ್ಧರಾಮೇಶ್ವರರು. ಅವರು ಬಾಲ್ಯದಲ್ಲಿ ಶಿವನ ರೂಪವಾದ ಕಪಿಲಸಿದ್ಧಮಲ್ಲಿಕಾರ್ಜುನನ್ನು ಆರಾಧಿಸುತ್ತ, ಕಡೆನಾಡ ಲಿಂಗ(ಶ್ರೀಶೈಲ ಮಲ್ಲಿಕಾರ್ಜುನ)ವನ್ನು ನಡುನಾಡಿಗೆ (ಸೊನ್ನಲಾಪುರಕ್ಕೆ)ತಂದು ಸ್ಥಾಪನೆಮಾಡಿದರು. ಅವರು ಅಲ್ಲಮ ಪ್ರಭುದೇವರೊಂದಿಗೆ ಕಲ್ಯಾಣಕ್ಕೆ ಬಂದು, ಗುರು ಬಸವಣ್ಣನವರ ಸಂಪರ್ಕಕ್ಕೆ ಬಂದಮೇಲೆ

ಅನುಭವ ಮಂಟಪದಲ್ಲಿ ಹಲವಾರು ದಿನಗಳ ಕಾಲ ಇಷ್ಟಲಿಂಗವೇಕೆ ಬೇಕು? ಎಂದು ವಾದಿಸಿಸುತ್ತಾರೆ. ಇಷ್ಟಲಿಂಗದ ಮಹಿಮೆಗೆ ಮನಸೋತು ಗುರು ಚೆನ್ನಬಸವಣ್ಣನವರಿಂದ ಇಷ್ಟಲಿಂಗ ದೀಕ್ಷೆಯನ್ನು ಹೊಂದಿ ಶೈವ ಧರ್ಮದ ಶಿವಭಕ್ತಿಯಿಂದ ಲಿಂಗದೇವನ ಭಕ್ತಿಗೆ ಪರಿವರ್ತನೆ ಹೊಂದಿ ಲಿಂಗಾಯತರಾದರು. ಈ ಅಗಾಧವಾದ, ಮತ್ತು ತಾತ್ವಿಕವಾದ ಪರಿವರ್ತನೆ (Transition)ಗೆ ಆತ್ಮಕಥನವೇ ಆಗಿರುವ ಅವರ ವಚನಗಳಲ್ಲಿ ಸಾಕ್ಷಿ ದೊರೆಯುತ್ತದೆ.

ಎಲ್ಲ ಪ್ರಮಥರು ಲಿಂಗವ ಧರಿಸುತ್ತಿರಲು
ನಾನೇನು ಒಲ್ಲೆನೆಂಬುವುದು
ಕರ್ಮದ ಬಲೆಯೊ, ಮಾಯದ ಬಲೆಯೊ?
ಎಲೆ ಕಪಿಲಸಿದ್ಧಮಲ್ಲಿನಾಥಯ್ಯಾ, ನಾ ಧರಿಸಿಕೊಂಬುವೆ ಲಿಂಗವ.
ನೀ ಕರೆಸಿಕೊಂಬುವನಾಗು ಮತ್ತೋರ್ವನ ನಿನ್ನ ಪೂಜೆಗೆ;
ನಾ ನಿನ್ನವನಲ್ಲೆಲೆ ದೇವಾ.

ಹೀಗೆ ಲಿಂಗವ ಧರಿಸಿಕೊಂಡ ಶಿವಯೋಗಿ ಸಿದ್ಧರಾಮೇಶ್ವರರು, ಶಿವಭಕ್ತಿಯಿಂದ ಲಿಂಗದೇವನ ಭಕ್ತಿಗೆ ಪರಿವರ್ತನೆಯಾದರು. ಶಿವನ ಹೆಸರಾದ 'ಕಪಿಲಸಿದ್ಧ ಮಲ್ಲಿಕಾರ್ಜುನ' ಎಂಬ ವಚನಾಂಕಿತವನ್ನು ಬದಲಿಸಿಕೊಂಡು ನಿರಾಕಾರ ಲಿಂಗದೇವನ ಹೆಸರಾದ **'ಯೋಗಿನಾಥ'** ವಚನಾಂಕಿತವನ್ನು ಇಟ್ಟುಕೊಂಡು ವಚನಗಳನ್ನು ರಚಿಸುತ್ತ ಬಸವಯೋಗಿ ಸಿದ್ಧರಾಮೇಶ್ವರರಾದರು.

ಅಕ್ಕ ಮಹಾದೇವಿ ತಾಯಿಯವರ ಅಧ್ಯಾತ್ಮಿಕ ಜೀವನದಲ್ಲಿ ಗುರು ಸಿದ್ಧರಾಮೇಶ್ವರರಂತೆಯೇ ಆದರೆ ತುಸು ಭಿನ್ನವಾಗಿ ಇಂತಹ ಒಂದು ಮನಸಾಂತರ, ಬದಲಾವಣೆ, ಪರಿವರ್ತನೆ ಆಗುತ್ತದೆ. ಉಡುತಡಿಯ ಮಠದ ಪೀಠಾಧೀಶರಾದ ಗುರುಲಿಂಗದೇವರು ಶೈವ ಪರಂಪರೆಯವರು ಮತ್ತು ಶಿವನ ಆರಾಧಕರು. ಅವರ ಪ್ರಭಾವಲಯದಲ್ಲಿಯೇ ಬೆಳೆದವರು ಅಕ್ಕನ ತಂದೆ-ತಾಯಿಯರಾದ ಓಂಕಾರ ಮತ್ತು ಲಿಂಗಮ್ಮನವರು. ಸಹಜವಾಗಿ ಅಕ್ಕ ಶಿವಭಕ್ತಿಯ ಪರಿಸರದಲ್ಲಿ ಬೆಳೆದು ದೊಡ್ಡವಳಾದರು. ಗುರುಲಿಂಗದೇವರು ಮುಂದೊಂದು ದಿನ ಗುರುಬಸವಣ್ಣನವರ ಮತ್ತು ಲಿಂಗಾಯತ ಧರ್ಮದ ಪ್ರಭಾವಕ್ಕೊಳಗಾಗಿ ಇಷ್ಟಲಿಂಗದೀಕ್ಷೆಯನ್ನು ಪಡೆದು ಲಿಂಗಾಯತರಾದರು. ತಮ್ಮ ಶಿಷ್ಯಂದಿರಾದ **ಓಂಕಾರ ಮತ್ತು ಲಿಂಗಮ್ಮ** ದಂಪತಿಗಳಿಗೂ ಇಷ್ಟಲಿಂಗದೀಕ್ಷೆಯನ್ನು ನೀಡಿದರಾದರೂ; ಕಡ್ಡಾಯವಾಗಿ ಏಕದೇವೋಪಾಸನೆಯನ್ನು ಬೋಧೆ ಮಾಡಿರಲಿಲ್ಲ. ಓಂಕಾರ ಲಿಂಗಮ್ಮನವರು ಇಷ್ಟಲಿಂಗ ದೀಕ್ಷೆಯನ್ನು ಪಡೆದುಕೊಂಡಮೇಲೂ ಹಿಂದಿನಿಂದ ಬಂದ ಶಿವನ ಆರಾಧನೆ ಮತ್ತು ಶಿವದೇವಾಲಯಗಳಿಗೆ ಹೋಗುವ ಪದ್ಧತಿಯನ್ನು ಅಷ್ಟು ಸುಲಭವಾಗಿ ಕೈಬಿಡಲಿಲ್ಲ. ತಮ್ಮ ಮಗಳಿಗೂ ಶಿವಭಕ್ತಿಯನ್ನೇ ಕಲಿಸಿಕೊಂಡು ಪೋಷಿಸಿಕೊಂಡು ಬಂದರು.

ಅಕ್ಕನಲ್ಲಿ ಹೆಂಗೂಸೆಂಬ ಭಾವವು ಮೈದೋರದ (ಕನ್ನೆತನ ಕಾಲಿಡದ) ಮುನ್ನವೆ ಗುರುಲಿಂಗದೇವರು ಅಕ್ಕನಿಗೂ ಲಿಂಗದೀಕ್ಷೆಯನ್ನು ದಯಪಾಲಿಸಿದರು. ಇಷ್ಟಲಿಂಗ ದೀಕ್ಷೆ ಪಡೆದ ನಂತರ ಅಕ್ಕನಲ್ಲಿ ಸುಪ್ತವಾಗಿ ಹುದುಗಿದ್ದ ಜ್ಞಾನಗಂಗೆಯು ವಚನಕಾರಂಜಿಯಾಗಿ ಹೊರಚಿಮ್ಮತೊಡಗಿತು. "ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ" ಎನ್ನುವ ವಚನದೊಂದಿಗೆ ದೀಕ್ಷಾಗುರುವನ್ನು ಕೊಂಡಾಡಿ ಅಂದಿನಿಂದ ಅಕ್ಕ ಬಾಲ್ಯದಲ್ಲಿ ಅದಮ್ಯವಾದ ಶಿವಭಕ್ತಿಯನ್ನು ಇಟ್ಟುಕೊಂಡು ಶಿವನ ಆರಾಧಕಳಾಗಿ ವಚನಗಳನ್ನು ಬರೆಯಲಾರಂಭಿಸಿದರು. ಭಕ್ತ ಧ್ರುವ, ಕೋಳೂರು ಕೊಡಗೂಸು, ಶಿವಯೋಗಿ ಸಿದ್ಧರಾಮೇಶ್ವರರು ಮತ್ತು ಇತರ ಶಿವಭಕ್ತರ ಕಥೆಗಳನ್ನು ತಮ್ಮ ತಾಯಿಯಿಂದ ಕೇಳುತ್ತಿದ್ದರು. ಈ ಕಥೆಗಳಿಂದ ಪ್ರಭಾವಿತರಾದ

ಅಕ್ಕ ಅವರಂತೆಯೇ ತಾನು ಕೂಡ ಶಿವನ ಕರುಣೆಗಾಗಿ, ಅವನ ಒಲುಮೆ ಮತ್ತು ಪ್ರೀತಿಗಾಗಿ ಹಂಬಲಿಸುತ್ತ ಇಷ್ಟಲಿಂಗಪೂಜೆಯನ್ನು ಮಾಡುತ್ತ, ಚೆನ್ನಮಲ್ಲಿಕಾರ್ಜುನನಲ್ಲಿಯೇ, ತನ್ನ ಭಕ್ತಿ, ಪ್ರೀತಿ ಮತ್ತು ವ್ಯಾಮೋಹ ತೋರುತ್ತ ಅವನೇ ತನ್ನ ಗಂಡ ಎಂದು ಭಾವಿಸಿ, ಪರಮಾತ್ಮನ ಸಗುಣ ಸಾಕ್ಷಾತ್ಕಾರವನ್ನು ಶಿವನ ರೂಪದಲ್ಲಿ ಪಡೆದುಕೊಂಡರು. ದಿನಕಳೆದಂತೆ ಕಲ್ಯಾಣದ ಜಂಗಮರು ಧರ್ಮಪ್ರಚಾರ ಮಾಡುತ್ತ, ವಚನಗಳ ಪ್ರತಿಗಳನ್ನು ಮಾಡಿಸಿ ವಚನಗಳ ಸಂಚಲನ ಮೂಡಿಸಿದಾಗ ವಚನಗಳಲ್ಲಿಯ ನಿರಾಕಾರ ಪರಮಾತ್ಮನ ಸ್ವರೂಪವನ್ನು ಅಧ್ಯಯನ ಮಾಡುತ್ತ.. ಮಾಡುತ್ತ.. ಅಕ್ಕನ ಮನಸ್ಸು ದ್ವಂದ್ವ ಭಾವನೆಗೊಳಗಾಗುತ್ತದೆ. ತನ್ನ ಮನಸ್ಸಿನ ತುಮುಲವನ್ನು ಗುರುಲಿಂಗದೇವರಲ್ಲಿ ಇಂತು ಬಿನ್ನೈಸಿಕೊಂಡಳು: **"ಗುರುಗಳೇ ಶಿವನಿಗೂ ಮತ್ತು ದೇವನಿಗೂ ವ್ಯತ್ಯಾಸವಿದೆಯೇ? ನಾನು ಅರ್ಚಿಸುವ ಚೆನ್ನಮಲ್ಲಿಕಾರ್ಜುನದೇವರು ದೇವನಲ್ಲವೆ? ದೇವನಾರು, ಶಿವನಾರು?"**ಎಂದು. ಕಮ್ಮಾರನು ಕಬ್ಬಿಣವನ್ನು ಕಾಯ್ದಾಗಲೆ ಬಡಿದು ಆಕಾರಕ್ಕೆ ತರುವಂತೆ, ಗುರುಲಿಂಗದೇವರು ಪರಿಪಕ್ವ ಮತಿಯನ್ನು ಗಳಿಸಿಕೊಂಡ ಅಕ್ಕನಿಗೆ ಚೆನ್ನಮಲ್ಲಿಕಾರ್ಜುನದೇವರು ಮತ್ತು ನಿರಾಕಾರ ನಿರ್ಗುಣನಾದ ಸೃಷ್ಟಿಕರ್ತದೇವರಿಗೂ ಇರುವ ವ್ಯತ್ಯಾಸನ್ನು ಇಂತು ಬೋಧಿಸಿದರು: **"ಮಗಳೇ.. ಚೆನ್ನಮಲ್ಲಿಕಾರ್ಜುನ(ಶಿವ)ನು ಸುಮಾರು ಒಂಬತ್ತು ಸಾವಿರ ವರ್ಷಗಳ ಹಿಂದೆ ಈ ಇಳೆಯಲ್ಲಿ ಜನಿಸಿ, ಗುರುಬಸವಣ್ಣನವರಂತೆ ಭಕ್ತಿ ಪರಂಪರೆಯನ್ನು ಹುಟ್ಟುಹಾಕಿದ ಮಹಾ ಪುರುಷ. ಗಿರಿಜೆಯನ್ನು ವರಿಸಿ, ಕೈಲಾಸ ಪರ್ವತದಲ್ಲಿ ವಾಸವಿದ್ದು ಜಂಬೂದ್ವೀಪದ ತುಂಬೆಲ್ಲ ಭಕ್ತಿ ಪರಂಪರೆಯನ್ನು ಬೆಳೆಸಿದ. ಅಷ್ಟೇ ಅಲ್ಲ ಜಗತ್ತಿನ ಪ್ರಥಮ ಯೋಗಿಯಾಗಿ; ಯೋಗ, ಸಂಗೀತ, ನಾಟ್ಯ, ಕಲೆಗಳನ್ನು ಬೆಳೆಸಿದ ಮಹಾಪುರುಷ. ವಿಭೂತಿ-ರುದ್ರಾಕ್ಷಿ-ಮಂತ್ರಗಳನ್ನು ನೀಡಿದ ದಿವ್ಯಪುರುಷ. ಶಿವನೂ ಕೂಡ ದೇವರ ಮಂತ್ರವನ್ನು ಅನುಸಂಧಾನಿಸುತ್ತ, ಧ್ಯಾನಮಗ್ನನಾಗಿ ಕುಳಿತಿರುವ ಮೂರ್ತಿಗಳನ್ನು ನೋಡಿಲ್ಲವೇ? ಅದಕ್ಕಾಗಿ ಗುರುಬಸವಣ್ಣನವರು ಹರನನ್ನು ಗುರುವಿನ ಸ್ಥಾನದಲ್ಲಿಟ್ಟು ಗೌರವಿಸುತ್ತ ಸೃಷ್ಟಿಕರ್ತ ಲಿಂಗದೇವನನ್ನು ಉರ-ಕರದಲ್ಲಿಟ್ಟು ಪೂಜಿಸುತ್ತಿದ್ದಾರೆ."** ಎಂದು ಹೇಳಿ ಗುರು ಬಸವಣ್ಣನವರ **"ಹರನು ಮೂಲಿಗನಾಗಿ ಪುರಾತರೊಳಗಾಗಿ"; "ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ" "ಅಮೂಲ್ಯನು ಅಪ್ರಮಾಣನು ಅಗೋಚರ ಲಿಂಗವು"; ಪ್ರಣವಾರೂಢನು ಪ್ರಣವ ಸ್ವರೂಪನು"; ವಿಶ್ವತೋಚಕ್ಷು ನೀನೆ ದೇವಾ, ವಿಶ್ವತೋಬಾಹು ನೀನೆ ದೇವಾ"** ಎನ್ನುವ ವಚನಗಳನ್ನು ಪುಂಖಾನುಪುಂಖವಾಗಿ ವಿವರಿಸಿ ಹೇಳಿದಾಗ ಅಕ್ಕನ ಬೌದ್ಧಿಕ ಮತ್ತು ಆಧ್ಯಾತ್ಮಿಕ ದುಗುಡವು ಬಿಸಿಲಿಗೊಡ್ಡಿದ ಹಿಮದಂತೆ ಕರಗಿಹೋಯಿತು. ಅಕ್ಕನ ಮನಸ್ಸು ಹಗುರವಾಗಿ ಮೆಲ್ಲನೆ ಗುರುಗಳಿಗೆ ಇಂತು ಕೇಳಿದಳು: **"ಹಾಗಾದರೆ ಗುರುಗಳೇ ನನ್ನ ಮನೋವಲ್ಲಭನಾದ ಚೆನ್ನಮಲ್ಲಿಕಾರ್ಜುನನಿಗೆ ಯಾವ ಸ್ಥಾನವನ್ನು ಕೊಡಬೇಕು?"** ಆಗ ಗುರುಗಳು: **"ಮಗಳೇ ಚೆನ್ನಮಲ್ಲಿಕಾರ್ಜುನನ್ನು ಇನ್ನು ಮುಂದೆ ಗುರುವಿನ ಸ್ಥಾನದಲ್ಲಿ ಇಟ್ಟು, ಚೆನ್ನಮಲ್ಲಿಕಾರ್ಜುನದೇವರಿಗೂ ದೇವನಾದ ಲಿಂಗದೇವನನ್ನು ಹೃದಯಾಧೀಶನನ್ನಾಗಿ ಮಾಡಿಕೋ"** ಎಂದು ಅತ್ಯಂತ ವಾತ್ಸಲ್ಯದಿಂದ ನುಡಿದಾಗ ಅಕ್ಕನ ಕಣ್ಣುಗಳಲ್ಲಿ ಆನಂದ ಬಾಷ್ಪ ಮೂಡಿ, ಮನವು **"ಚೆನ್ನಮಲ್ಲಿಕಾರ್ಜುನದೇವರ ದೇವಾ.. ಚೆನ್ನಮಲ್ಲಿಕಾರ್ಜುನದೇವರ ದೇವಾ.."** ಎಂದು ಉಲಿಯತೊಡಗಿತು. ಇದು ಅಕ್ಕನ ಜೀವನದ ಮಹತ್ವಪೂರ್ಣ ಘಟನೆ. ಈ ಮುಂಚೆ ಅಕ್ಕ **"ಹೊಳೆವ ಕೆಂಜೆಡೆಗಳ ಸುಲಿಪಲ್ಲ ಗೊರವ"; "ಗಿರಿಯ ಮೇಲೊಬ್ಬ ಗೊರವ ಕುಳ್ಳಿರ್ದುದ ಕಂಡೆ", "ಚೋಳಿಯಕ್ಕನ ಬಾಯ ತುತ್ತ ಸವಿದ ಶಶಿಮೌಳಿ ಬಾರೊ, ಚೋಳನಿತ್ತನ್ನವ ಕೈಕೊಂಡ ಕರದ ಕಪಾಲಿ ಬಾರೊ" "ಕೋಳೂರು ಕೊಡಗೂಸು ತಂದಮೃತವನುಂಡ ಲೀಲ ಬಾರೊ" ಹಿಂಗದೆ ಬೋಗಣ್ಣನೊಡನುರುಳಿದ ಸಚ್ಚಿದಂಗ ಬಾರೊ" "ತುಂಗ ಜಡೆಯಲಿ ಗಂಗೆಯ ಧರಿಸಿರ್ಪ ನಿಜಾಂಗ ಬಾರೊ"** ಎನ್ನುತ್ತಿದ್ದ ಅಕ್ಕನು, ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ

ಚೆಲುವಂಗಾನೊಲಿದೆನವ್ವಾ" ಎಂದು ಹೇಳುತ್ತ ಚೆನ್ನಮಲ್ಲಿಕಾರ್ಜುನನ(ಏಕ-ದೇವತಾ) ಉಪಾಸನೆಯಿಂದ ಚೆನ್ನಮಲ್ಲಿಕಾರ್ಜುನದೇವರ ದೇವನ-(ಏಕ ದೇವೋಪಾಸನೆಯತ್ತ ಪರಿವರ್ತನೆಯಾಗಿ, ಮುಂದೆ ತನ್ನ ವಚನಾಂಕಿತವನ್ನು ಚೆನ್ನಮಲ್ಲಿಕಾರ್ಜುನದೇವರ ದೇವಾ ಎಂದು ಬಳಸಿಕೊಂಡ ಅಕ್ಕನ ಭಾವ ತರಂಗಗಳು ಎನ್ನ ಭಾವ ತರಂಗಗಳಿಗೆ ಪ್ರವಹಿಸಿ ಅಕ್ಕನ ಜೀವನದ ಈ ಒಂದು ಮಹತ್ವ ಪೂರ್ಣ ಘಟ್ಟವನ್ನು ಗುರ್ತಿಸಿ ತದನಂತರದ ಅಕ್ಕನ ವಚನಗಳಲ್ಲಿ "ಚೆನ್ನಮಲ್ಲಿಕಾರ್ಜುನದೇವರ ದೇವಾ" ಎನ್ನುವ ವಚನಾಂಕಿತವನ್ನು ಅಳವಡಿಸಿದ್ದೇನೆ. ಹೀಗಾಗಿ ಅಕ್ಕನ:

"ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆ ಅವ್ವಾ!
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗಾನೊಲಿದೆ ಎಲೆ ಅವ್ವಾ!
ನೀನು ಕೇಳಾ ತಾಯೆ! ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು.
ಕುಲ ಸೀಮೆಯಿಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ.
ಇದು ಕಾರಣ ಚೆನ್ನಮಲ್ಲಿಕಾರ್ಜುನದೇವರ ದೇವನೆ ಚೆಲುವ ಗಂಡನೆನಗೆ
ಈ ಸಾವ, ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು!"

ಎನ್ನುವ ವಚನವು, ಸಿದ್ಧರಾಮೇಶ್ವರರ "ಎಲೆ ಕಪಿಲಸಿದ್ಧ ಮಲ್ಲಿನಾಥಯ್ಯಾ, ನಾ ಧರಿಸಿಕೊಂಬುವೆ ಲಿಂಗವ ನೀ ಕರೆಸಿಕೊಂಬುವನಾಗು ಮತ್ತೋರ್ವನ ನಿನ್ನ ಪೂಜೆಗೆ; ನಾ ನಿನ್ನವನಲ್ಲೆಲೆ ದೇವಾ." ಎನ್ನುವ ವಚನದಷ್ಟೇ ಮಹತ್ವ ಪೂರ್ಣ ವಚನವಾಗಿ ನಿಲ್ಲುತ್ತದೆ.

"ಚೆನ್ನಮಲ್ಲಿಕಾರ್ಜುನದೇವರ ದೇವ" ವಚನಾಂಕಿತ ನನ್ನ ಕಲ್ಪನೆಯಲ್ಲ. ಸ್ವತಃ ಅಕ್ಕನವರೇ ಅನೇಕ ವಚನಗಳಲ್ಲಿ "ಚೆನ್ನಮಲ್ಲಿಕಾರ್ಜುನದೇವರ ದೇವ" ಎನ್ನುವ ವಚನಾಂಕಿತವನ್ನು ಪ್ರಯೋಗ ಮಾಡಿದ್ದಾರೆ. ಸದ್ಯದಲ್ಲಿ ಲಭ್ಯವಿರುವ ಕರ್ನಾಟಕ ಸರಕಾರದ ಪುಸ್ತಕ ಪ್ರಾಧಿಕಾರದಿಂದ ಪ್ರಕಟವಾದ ಶಿವಶರಣೆಯರ ವಚನ ಸಂಪುಟದಲ್ಲಿರುವ ಅಕ್ಕನ ಅನೇಕ ವಚನಗಳಲ್ಲಿ ಈ ರೀತಿಯ ವಚನಾಂಕಿತ ಪ್ರಯೋಗವಾಗಿದೆ.

೨೦೦೧ರ ದ್ವಿತೀಯ ಮುದ್ರಣ: ವಚನ ಸಂಪುಟ-೫

೧. ವಚನ ಸಂಖ್ಯೆ-೮೨ : "ಉದಯಾಸ್ತಮಾನ ವೆಂಬೆರಡು ಕೊಳಗದಲ್ಲಿ";
೨. ವಚನ ಸಂಖ್ಯೆ-೯೪ : "ಎನಗೇಕಯ್ಯಾ ? ನಾ ಪ್ರಪಂಚಿನ ಪುತ್ಥಳಿ
೩. ವಚನ ಸಂಖ್ಯೆ-೧೫೬: "ಕಾಣುತ್ತ ಕಾಣುತ್ತ ಕಂಗಳು ಮುಚ್ಚಿದೆ"
೪. ವಚನ ಸಂಖ್ಯೆ-೧೭೦: "ಕಾಯವಿಕಾರಿಗೆ ಕಾಯಕ್ಕೆ ಮೆಚ್ಚಿದೆ"
೫. ವಚನಸಂಖ್ಯೆ-೨೮೩ : "ಪ್ರಥಮದಲಾದ ಮೋಹ ಸಾತ್ವಿಕವಾದಡೆ ಕಿತವೇಕಯ್ಯಾ?"
೬. ವಚನ ಸಂಖ್ಯೆ-೨೮೯: "ಫಲ ಒಳಗೆ ಪಕ್ವವಾಗಿಯಲ್ಲದೆ ಹೊರಗಳ ಸಿಪ್ಪೆ ಒಪ್ಪಗೆಡದು"
೭. ವಚನ ಸಂಖ್ಯೆ-೨೮೯: "ಮರೆದೊರಗಿ, ಕನಸ ಕಂಡು ಹೇಳುವಲ್ಲಿ ಸತ್ತ ಹೆಣ ಎದ್ದಿತು"
೮. ವಚನ ಸಂಖ್ಯೆ-೩೭೧: "ವೃಷಭನ ಹಿಂದೆ ಪಶುವಾನು ಬಂದೆನು"
೯. ಶಿವದಾಸ ಗೀತಾಂಜಲಿ-ಸಂ.ಡಾ. ಎಲ್. ಬಸವರಾಜು ಪಲ್ಲವಿ ಸಂಖ್ಯೆ: ೬೮೧ :
"ಆಪತ್ತಿಗೊಳಗಾದೆನಮ್ಮಯ್ಯ, ನಾ ನಪ್ಪತ್ತಿಗೊಳಗಾದೆ !"(ಸ್ವರ ವಚನ)

ಈ ಮೇಲಿನ ಎಲ್ಲಾ ವಚನಗಳಲ್ಲೂ ವಚನಾಂಕಿತ "ಚೆನ್ನಮಲ್ಲಿಕಾರ್ಜುನದೇವರ ದೇವಾ" ಎಂದಿದೆ. ಯೋಗಾಂಗ ತ್ರಿವಿಧಿಯಲ್ಲಿ **"ಎಲ್ಲ ದೇವರ ದೇವಾ ವಲ್ಲಭನೆ, ಗುರು ಚೆನ್ನಮಲ್ಲಿಕಾರ್ಜುನನೆ ಮನದೊಳಗೆ । ಇರು ಕಂಡಾ ಬಲ್ಲಂತೆ ನಿಮ್ಮ ಸ್ತುತಿಸುವೆನು"** ಎಂದು ಹೇಳುವಲ್ಲಿ ವಲ್ಲಭನಾರು? ಗುರು ಯಾರು? ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅಂದರೆ ಅಕ್ಕನು ಪ್ರೌಢಮತಿಯಾದಾಗ ಚೆನ್ನಮಲ್ಲಿಕಾರ್ಜುನದೇವರ ದೇವನನ್ನು ಆರಾಧಿಸಿದರೇ ಹೊರತು, ಶ್ರೀಶೈಲ ಚೆನ್ನಮಲ್ಲಿಕಾರ್ಜುನನ ಅಲ್ಲ. ಹಾಗಂತ ಚೆನ್ನಮಲ್ಲಿಕಾರ್ಜುನ(ಶಿವ)ನನ್ನು ಕಡೆಗಣಿಸಿದರು ಎಂದು ಅರ್ಥವಲ್ಲ. ಕಲ್ಯಾಣದಲ್ಲಿ ಗುರುಬಸವಣ್ಣನವರ ಕೃಪಾಕಟಾಕ್ಷದಲ್ಲಿ ಪರಮಾತ್ಮ-ಲಿಂಗದೇವನ ನಿರ್ಗುಣ ಸಾಕ್ಷಾತ್ಕಾರ ಪಡೆದು ತನ್ನಲ್ಲಿ ಲಿಂಗದೇವನನ್ನು, ಲಿಂಗದೇವನಲ್ಲಿ ತನ್ನನ್ನು ಒಳಹೊರಗೆ ತೆರಹಿಲ್ಲದೆ ಕಂಡುಕೊಂಡ ಬಳಿಕವೇ ರಚಿಸಿರುವ

ಅವರ ಅನೇಕ ವಚನಗಳಲ್ಲಿ ಮತ್ತು ಯೋಗಾಂಗ ತ್ರಿವಿಧಿಯಲ್ಲಿ ಗುರುಚೆನ್ನಮಲ್ಲೇಶ, ಗುರು ಚೆನ್ನಮಲ್ಲ, ಚೆನ್ನಮಲ್ಲಿಕಾರ್ಜುನ ಗುರು ಎಂದು ಸಂಬೋಧಿಸಿರುವದು (Pronounced) ಮಾತ್ರವಲ್ಲ; ಯೋಗಾಂಗ ತ್ರಿವಿಧಿಯ ಆರಂಭದಲ್ಲಿಯೇ **"ಶ್ರೀಮಹಾ ಮಹಿಮನೆ ಸೋಮಶೇಖರ ಗುರುವೆ ಕಾಮಿತದ ಫಲವ ಕೊಡು ಕಂಡಾ ಎನ್ನ ಹೃದ್ಧಾಮದೊಳ್ ನಿಂದು ಮೆರೆ ಕಂಡಾ"** ಎಂದು ಸೋಮಶೇಖರನಾದ ಶಿವನನ್ನು ಗುರು ಎಂದು ಕರೆದು, ಅವನನ್ನು ಸ್ಮರಿಸಿ ಭಕ್ತಿ ಗೌರವಗಳನ್ನು ಸಮರ್ಪಿಸಿದ್ದಾರೆ. ನಂತರ ಬರುವ ಪದ್ಯಗಳಲ್ಲಿ ಆರಾರು ತತ್ವದಲ್ಲಿ ಹುದುಗಿರುವ ನಿರಾಕಾರದೇವನನ್ನು ಸ್ತುತಿಸಿ ಸಾಧಕನಾದ ಭಕ್ತನು ಷಟಸ್ಥಲ ಕ್ರಮದಲ್ಲಿ ಸಾಗುವಾಗ ಸಾಧಿಸುವ ಬಗೆಯನ್ನು ಅಕ್ಕನವರು ಈ ಕೆಳಗಿನಂತೆ ಕೊಡುತ್ತಾರೆ.

೧. ಭಕ್ತಸ್ಥಲದಲ್ಲಿಯ ಭಕ್ತನು ಶ್ರದ್ಧಾ ಭಕ್ತಿಯನ್ನು ಮಾಡುತ್ತ ಘ್ರಾಣದಲ್ಲೊದಗುವ ಗಂಧವನು ಆಚಾರಲಿಂಗಕ್ಕೆ ಅರ್ಪಿಸಬೇಕು
೨. ಮಹೇಶಸ್ಥಲಕ್ಕೆ ಪಾದಾರ್ಪಣೆ ಮಾಡಿದ ಭಕ್ತನು ನಿಷ್ಠಾ ಭಕ್ತಿಯನ್ನು ಮಾಡುತ್ತ ಜಿಹ್ವೆಯಲ್ಲೊದಗುವ ರಸವನ್ನು ಗುರುಲಿಂಗಕ್ಕೆ ಅರ್ಪಿಸಬೇಕು.
೩. ಪ್ರಸಾದಿಸ್ಥಲದಲ್ಲಿರುವ ಭಕ್ತನು ಅವಧಾನ ಭಕ್ತಿಯನ್ನು ಮಾಡುತ್ತ ನೇತ್ರದಲ್ಲೊದಗುವ ರೂಪವನ್ನು ಶಿವಲಿಂಗಕ್ಕೆ ಅರ್ಪಿಸಬೇಕು.
೪. ಪ್ರಾಣಲಿಂಗಿಸ್ಥಲದಲ್ಲಿರುವ ಭಕ್ತನು ಅನುಭಾವ ಭಕ್ತಿಯನ್ನು ಮಾಡುತ್ತ ತ್ವಕ್ಕಿನಲ್ಲೊದಗುವ ಸ್ಪರ್ಶನವನ್ನು ಜಂಗಮಲಿಂಗಕ್ಕೆ ಅರ್ಪಿಸಬೇಕು
೫. ಶರಣಸ್ಥಲಕ್ಕೇರಿದ ಭಕ್ತನು ಆನಂದ ಭಕ್ತಿಯನ್ನು ಮಾಡುತ್ತ ಶ್ರೋತ್ರದಲ್ಲೊದಗುವ ಶಬ್ದವನ್ನು ಪ್ರಸಾದಲಿಂಗಕ್ಕೆ ಅರ್ಪಿಸಬೇಕು
೬ ಐಕ್ಯಸ್ಥಲವನ್ನವನ್ನಾರೋಹಿಸಿದ ಭಕ್ತನು ಸಮರಸ ಭಕ್ತಿಯನ್ನು ಮಾಡುತ್ತ ಪಂಚೇಂದ್ರಿಯ ಗಳಲ್ಲೊದಗುವ ತೃಪ್ತಿಯನ್ನು ಮಹಾಲಿಂಗಕ್ಕೆ ಅರ್ಪಿಸಬೇಕು.

ನಂತರದ ಜೀವನವನ್ನು ಅಂಗದಾಶ್ರಯವಳಿದು ಲಿಂಗದಾಶ್ರಯದಲ್ಲಿ ಕಳೆಯುತ್ತ ಮಹಾಭಕ್ತಸ್ಥಲದಲ್ಲಿ ನಿಂದು ಸಾಗಿಸಬೇಕು.ಈ ರೀತಿ ಅತ್ಯಂತ ಗಹನವಾದ ತತ್ವಜ್ಞಾನವನ್ನು ಅಕ್ಕ ತಮ್ಮ ಯೋಗಾಂಗ ತ್ರಿವಿಧಿಯಲ್ಲಿ ಹೇಳಿದ್ದಾರೆ. ಈ ರೀತಿಯಾಗಿ ಅಂಗದಾಶ್ರಯವಳಿದು ಲಿಂಗದಾಶ್ರಯವನ್ನು ಹೊಂದಿದ ಮೇಲೂ ಯೋಗಿರಾಜನಾದ ಶಿವನನ್ನು ಜಂಬೂದ್ವೀಪದ ಭಕ್ತಿಪರಂಪರೆಯ ಮೂಲಿಗನೆಂದು ಯೋಗಾಂಗ ತ್ರಿವಿಧಿಯ ಕೊನೆಯಲ್ಲೂ **"ಗುರು ಚೆನ್ನಮಲ್ಲನ ವರಕೃಪಾರಸವೆನ್ನ ಶರೀರದಲಿ ತುಂಬಿ ಹೊರ ಸೂಸಿ ಅದರಿಂದ ಬರೆದಿಹೆನು ಬಲ್ಲ ಪರಿಯಲ್ಲಿ"** ಎಂದು ಶಿವನನ್ನು ಗುರುವಾಗಿ ಕಂಡರೇ ಹೊರತು ದೇವನನ್ನಾಗಿಯಲ್ಲ ಎನ್ನುವುದನ್ನು ಸ್ವತಃ ಅಕ್ಕನವರೇ ಬರೆದಿದ್ದಾರೆ.

ಹೀಗೆ ಓದುಗರು ಅಕ್ಕನ, ಮನಸ್ಸಿನಲ್ಲಾದ ಚೆನ್ನಮಲ್ಲಿಕಾರ್ಜುನದೇವರ (ಏಕ ದೇವತಾ) ಆರಾಧನೆಯಿಂದ ಚೆನ್ನಮಲ್ಲಿಕಾರ್ಜುನದೇವರ ದೇವನ ಆರಾಧನೆಗೆ ಬದಲಾವಣೆ ಹೊಂದಿರುವುದನ್ನು ಮನವರಿಕೆ ಮಾಡಿಕೊಂಡು, ಚೆನ್ನಮಲ್ಲಿಕಾರ್ಜುನ ದೇವರ ದೇವಾ ವಚನಾಂಕಿತವನ್ನೂ ಮನನ ಮಾಡಿಕೊಳ್ಳುವಿರೆಂದು ನಂಬುತ್ತೇನೆ. ಜೊತೆಗೆ ಅಕ್ಕನೆನಗೊಲಿದ ಕಾರಣದಿ ಈ ಸಂಶೋಧನೆಗೈದಿರುವುದನ್ನು ಓದುಗರು ಪ್ರೀತಿಯಿಂದ, ಅಭಿಮಾನದಿಂದ ಸ್ವೀಕರಿಸುವಿರಾಗಿ ನಂಬುತ್ತೇನೆ. ಹಿರಿಯರಿಗೆ ಓದಲು ಅನುಕೂಲವಾಗಲೆಂದು ಪ್ರಸ್ತುತ ಗ್ರಂಥದಲ್ಲಿ ಅಕ್ಷರಗಳ ಗಾತ್ರ ಹೆಚ್ಚಿಸಲಾಗಿದೆ. ಜೊತೆಗೆ ನಮ್ಮ ಶರಣರಿಗೆ ಗ್ರಂಥವು ಸುಲಭವಾದ ಬೆಲೆಯಲ್ಲಿ ದೊರಕಬೇಕೆನ್ನುವ ಕಳಕಳಿಯಿಂದ ದಾಸೋಹಿಗಳ ನೆರವಿನೊಂದಿಗೆ ಪೂಜ್ಯ ಮಾತಾಜಿಯವರು ಅತ್ಯಂತ ಕಡಿಮೆ ಬೆಲೆಯಿಟ್ಟಿದ್ದಾರೆ. ಹೀಗಾಗಿ ಪ್ರತಿಯೊಬ್ಬ ಶರಣಬಂಧುವು ನಿಂದಕರ ಗಾಳಿ ಮಾತುಗಳಿಗೆ ಬೆಲೆಕೊಡದೆ ಈ ಗ್ರಂಥವನ್ನು ಓದಿ ಇದರ ಮಹತ್ವ ಅರಿತುಕೊಂಡು ಮುಂದಿನ ಕೃತಿಗಳನ್ನು ರಚಿಸಲಿಕ್ಕೆ ಆಶೀರ್ವದಿಸಬೇಕೆಂದು ಕೇಳಿಕೊಳ್ಳುತ್ತೇನೆ.

- ಸಚ್ಚಿದಾನಂದ ಚಟ್ಟನಳ್ಳಿ

"ಶರಣು ಶರಣಾರ್ಥಿಗಳು"

ಶರಣ ಮೇಳದಲ್ಲಿ ಬಿಡುಗಡೆಯಾಗಲಿರುವ ಪುಸ್ತಕಗಳು

1. ಬಸವ ವಚನಾಮೃತ – ಗುರುಬಸವಣ್ಣನವರ 1008 ವಚನಗಳು, ವ್ಯಾಖ್ಯಾನ ಸಹಿತವಾಗಿ 2ನೆಯ ಆವೃತ್ತಿ. ಬೆಲೆ 310ರೂ.ಗಳು. ಸಂಪಾದಕರು – ಮಾತಾಜಿ. ಬಸವಕಲ್ಯಾಣದಲ್ಲಿ ನಡೆದ ಕಲ್ಯಾಣ ಪರ್ವದಲ್ಲಿ ಮೊದಲನೆಯ ಆವೃತ್ತಿ ಬಿಡುಗಡೆಯಾಗಿ ಪ್ರತಿಗಳೆಲ್ಲ ತೀರಿದ್ದರಿಂದ ಗ್ರಂಥವು ಎರಡನೆಯ ಮುದ್ರಣ ಕಾಣುತ್ತಲಿದೆ.
2. ತರಂಗಿಣಿ–ಕನ್ನಡ ಆವೃತ್ತಿ. ಒಂಬತ್ತನೆಯ ಮುದ್ರಣ. ತರಂಗಿಣಿ ಪುಸ್ತಕ ಮುಗಿದಿದ್ದು ತುಂಬಾ ಬೇಡಿಕೆ ಇದ್ದಿತು. ಇದೀಗ ಸಿದ್ಧವಾಗಿದೆ. ಬೆಲೆ 350–00 ರೂ.
3. ಅಂಬಿಗರ ಚೌಡಯ್ಯನವರ ವಚನಗಳು, ಸಂಪಾದಕರು: ಸಚ್ಚಿದಾನಂದ ಚಟ್ನಳ್ಳಿ
4. ಹಡಪದ ಅಪ್ಪಣ್ಣ ಮತ್ತು ಲಿಂಗಮ್ಮನವರ ವಚನಗಳು, ಸಂಪಾದಕರು: ಸಚ್ಚಿದಾನಂದ ಚಟ್ನಳ್ಳಿ

ರಾಷ್ಟ್ರೀಯ ಬಸವ ದಳದ ಸದಸ್ಯತ್ವ

ಸಂಘಟನೆಯ ದೃಷ್ಟಿಯಿಂದ ರಾಷ್ಟ್ರೀಯ ಬಸವ ದಳದ ಕೇಂದ್ರ ಸಂಸ್ಥೆಯು ಸದಸ್ಯತ್ವದ ಅರ್ಜಿ ಪಡೆಯುತ್ತಿದೆ. ಶುಲ್ಕ ಕೇವಲ 50 ರೂಪಾಯಿಗಳು. ಸಂಸ್ಥೆಯ ವತಿಯಿಂದ ಆಗಬಹುದು ಅಥವಾ ವೈಯಕ್ತಿಕ ಸದಸ್ಯತ್ವವೂ ಆಗಬಹುದು. ಅರ್ಜಿಯಲ್ಲಿ ವಿಳಾಸ ಮತ್ತು ದೂರವಾಣಿ (ಮೊಬೈಲ್) ಸಂಖ್ಯೆ ಇರುವುದರಿಂದ ಸಂಪರ್ಕಿಸಲು ಅನುಕೂಲವಾಗುತ್ತದೆ. ಪ್ರತಿಯೊಬ್ಬರೂ ಶರಣ ಮೇಳಕ್ಕೆ ಬಂದಾಗ ಈ ಸದಸ್ಯತ್ವ ಪಡೆಯಲು ಯತ್ನಿಸಿರಿ.

ಕಲ್ಯಾಣ ಕಿರಣಕ್ಕೆ ಸದಸ್ಯರಾಗಿರಿ

ಗುರು ಬಸವಣ್ಣನವರ ವಚನಗಳ ವ್ಯಾಖ್ಯಾನ, ಪ್ರೌಢ ಸಂಪಾದಕೀಯ, ಉತ್ಕೃಷ್ಟ ಲೇಖನಗಳಿಂದ ಕೂಡಿ 1970ನೇ ಇಸವಿಯಿಂದಲೂ ಸತತವಾಗಿ ಪ್ರಕಟವಾಗುತ್ತಿರುವ ಕಲ್ಯಾಣ ಕಿರಣ ಮಾಸಪತ್ರಿಕೆಗೆ ಚಂದಾದಾರರಾಗಿರಿ. ವಾರ್ಷಿಕ ಚಂದಾ 200ರೂ. ಐದು ವರ್ಷದ ಚಂದಾ 1000 ರೂ. ಆಜೀವ ಸದಸ್ಯತ್ವ ಇರುವುದಿಲ್ಲ.

ಶರಣು ಶರಣಾರ್ಥಿ

ನಾ ಬಾಗುವೆ ಬಸವಾ
ನಿಮಗೆ ಶರಣಾಗುವೆ ಬಸವಾ ||ಪ||

ಅವಿರಳ ಜ್ಞಾನದೊಳು
ಅರಿವಿನ ದೀಪ್ತಿಯುರಿಸಿ
ಅವಿರತ ಶ್ರಮದೊಳು
ಅನುಭಾವ ಉಸಿರಿಸಿದ ನಿಮಗೆ

ಜ್ಞಾನದ ಸಂಗಮದೊಳು
ಜ್ಞಾನಗಂಗೆಯ ಹರಿಸಿ
ಜ್ಞಾನಿಗಳ ಅನುಭಾವದೊಳು
ಜ್ಞಾನಾಕಾಂಕ್ಷಿಯಾಗಲು ಅರುಹಿದ ನಿಮಗೆ

ಅಧ್ಯಾತ್ಮ ಪಥದೊಳು
ಅನುಭಾವ ಎಮಗಿರಿಸಿ
ಆರೂಢ ಜ್ಞಾನದೊಳು
ಆಮೋದ ಕರುಣಿಸಿದ ನಿಮಗೆ

ಬರಡು ಸಂಪ್ರದಾಯದ
ಬಂಧನವ ನೀ ಬಿಡಿಸಿ
ಬಸವ ಪ್ರಿಯ ಲಿಂಗದೇವನೊಳು
ಬಯಲಾದ ಗುರುವೇ ನಿಮಗೆ

ನಾ ಬಾಗುವೆ ಬಸವಾ
ನಿಮಗೆ ಶರಣಾಗುವೆ ಬಸವಾ..,

– ಪ್ರಿಯಾಂಕಾ, ಬದಾಮಿ



60 ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ
ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ



ಪೂಜ್ಯ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿಯವರ 41ನೇ ವರ್ಧಂತಿ ಆಚರಣೆ



ಕೂಡಲ ಸಂಗಮದಲ್ಲಿ ಜಗದ್ಗುರು ಲಿಂಗಾನಂದ ಸ್ವಾಮಿಗಳವರ 63 ಅಡಿ ಎತ್ತರದ ಭವ್ಯ ಸ್ಮಾರಕ



REGISTERED KA/BGW/50/2012-2014. RNI No.19980/70, POSTED AT MBC BANGALORE GPO ON 3RD.10TH,20TH OF EVERY MONTH, LICENCED TO POST WITHOUT PREPAMENT WPP-17, PAGES 32+4(COVER PAGES)